# ಜಮಾಅತಿನ ಚುನಾವಣಾ
# ನಿಯಮಗಳು

ಪ್ರಕಾಶನ:

ನಝ್ಝಾರತ್ ಉಲ್ಯಾ ಸದರ್ ಅಂಜುಮನ್ ಅಹ್ಮದಿಯಾ,

ಖಾದಿಯಾನ್ 2019

Published by:
Nazarat Ulia
Sadr Anjuman Ahmadiyya
Qadian - 143516, Dist - Gurdaspur
Punjab

(in Kannada)

# ಜಮಾಅತಿನ ಚುನಾವಣಾ ನಿಯಮಗಳು

ಪ್ರಕಾಶನ:

**ನಝ್ಝಾರತ್ ಉಲ್‌ಯಾ ಸದರ್ ಅಂಜುಮನ್ ಅಹ್ಮದಿಯಾ,**

**ಖಾದಿಯಾನ್ –2019**

**Jamathina chunavane niyamagalu**

Kannada Translation of urdu booklet

**“Qawaid Jamati Intekhabaat”**



| | |
|---|---|
| Compiled & Published by: | Nazarat Ulya Sadr Anjuman Ahmadiyya Qadian |
| First Edition: | 2019 |
| Copies: | 500 |
| Printed at: | Fazl-e- Umar Printing Press, Qadian, Distt. Gurdaspur, Punjab - 143516 |

# ಮುನ್ನುಡಿ

ಈಗ ಅಧಿಕಾರದಲ್ಲಿರುವ ಹುದ್ದೇದಾರರ ಅಧಿಕಾರದ ಕಾಲಾವಧಿ 31 ಮಾರ್ಚ್ 2019ಕ್ಕೆ ಕೊನೆಗೊಳ್ಳುವುದು. ಆದುದರಿಂದ 2019 ಮಾರ್ಚ್ ದಿನಾಂಕ 31ರೊಳಗೆ ಚಂದಾಗಳ ಲೆಕ್ಕಚಾರವನ್ನು ಮುಗಿಸಿ ಚುನಾವಣೆ ನಡೆಸಿ ಕೇಂದ್ರಕ್ಕೆ ವರದಿ ಕಳುಹಿಸಬೇಕು. ಏಕೆಂದರೆ ಏಪ್ರಿಲ್ ತಿಂಗಳಲ್ಲಿ ಮಂಜೂರಾತಿ ನೀಡುವ ಕೆಲಸ ಜಾರಿಗೊಳ್ಳುವುದು. ಅನಂತರ ಹೊಸ ಹುದ್ದೇದಾರರು ಅಧಿಕಾರ ವಹಿಸುವರು. ಈ ಚುನಾಯಿತ ಹುದ್ದೇದಾರರ ಅಧಿಕಾರದ ಕಾಲಾವಧಿ 2019 ಏಪ್ರಿಲ್‌ನಿಂದ 2022 ಮಾರ್ಚ್ ತನಕವಿರುವುದು.

**ನಾಝಿರ್ ಅಲ್‌ಲಾ ಖಾದಿಯಾನ್**

## ಸ್ಥಳೀಯ ಜಮಾಅತಿಗೆ ಸಂಬಂಧಿಸಿದ ನಿಯಮಗಳು

ಮೂರು ಅಥವಾ ಅದಕ್ಕಿಂತ ಹೆಚ್ಚು ಚಂದಾ ಕೊಡುವ ಅಹ್ಮದಿಯರು ಇರುವ ಸ್ಥಳದಲ್ಲಿ ಜಮಾಅತ್ ವ್ಯವಸ್ಥೆ ಸ್ಥಾಪಿಸಬೇಕು.

ತಜ್‌ನೀದ್ ಹತ್ತಕ್ಕಿಂತ ಕಡಿಮೆಯಾಗಿದ್ದರೂ ಒಬ್ಬ ಸದರ್, ಒಬ್ಬ ಮಾಲ್ ಸೆಕ್ರೆಟರಿಯನ್ನು ಖಂಡಿತ ನೇಮಿಸಬೇಕು. ಅನಂತರ ಜಮಾಅತಿನ ಸಂಖ್ಯೆ ಬಲ ಪ್ರಕಾರ ಇತರ ಸೆಕ್ರೆಟರಿಗಳನ್ನು ನೇಮಿಸಬೇಕು.

ಈ ಹುದ್ದೇದಾರರು ಚುನಾವಣೆಯ ಮೂಲಕ ನೇಮಿಸಲ್ಪಡಬೇಕು. ತಜ್‌ನೀದ್ ಕಡಿಮೆ ಇರುವಲ್ಲಿ ಸದರ್ ಮತ್ತು ಸೆಕ್ರೆಟರಿಯನ್ನು ನೇಮಿಸಲು ಶಿಫಾರಸ್ಸು ಮಾಡಬಹುದಾಗಿದೆ.

**ಹುದ್ದೇದಾರರ ಚುನಾವಣೆಗೆ ಸಂಬಂಧಿಸಿದ ನಿಯಮಗಳು:**

ಈ ವಿವರಣೆಯೊಂದಿಗೆ ಸ್ಥಳೀಯ ಜಮಾಅತಿಗೆ ಸಂಬಂಧಿಸಿದ ಸದರ್ ಅಂಜುಮನ್ ಅಹ್ಮದಿಯಾ ಖಾದಿಯಾನಿನ ನಿಯಮಗಳನ್ನು ಕೆಳಗೆ ಕೊಡಲಾಗಿದೆ:

ನಿಯಮ ಕ್ರಮಾಂಕ 290: ಅಹ್ಮದಿಯಾ ಜಮಾಅತ್ ವ್ಯವಸ್ಥೆ (ನಿಝಾಮ್) ಪ್ರಕಾರ ಕೆಲವು ಅಹ್ಮದಿಯರು ವಾಸಿಸುತ್ತಿರುವ ಪ್ರತಿಯೊಂದು ಸ್ಥಳದಲ್ಲಿ ನಾಝಿರ್ ಅಲ್‌ಲಾರವರ ಅನುಮತಿ ಪ್ರಕಾರ ಒಂದು ಸ್ಥಳೀಯ (ಲೋಕಲ್) ಜಮಾಅತನ್ನು ಸ್ಥಾಪಿಸಬಹುದು. (ಜಮಾಅತಿನ ಪ್ರೌಢ ವಯಸ್ಸಿನ ಎಲ್ಲ ವ್ಯಕ್ತಿಗಳು ಇದರ ಮೆಂಬರ್ ಆಗಿರುವುದು)

**ನಿಯಮ ಕ್ರಮಾಂಕ 291**: ಜಮಾಅತಿನ ಕೆಲಸಗಳನ್ನು ನಡೆಸಿಕೊಂಡು ಹೋಗಲು ಸ್ಥಾಪಿಸಲಾಗುವ ಈ ಸ್ಥಳೀಯ ಜಮಾಅತುಗಳು ನಾಝಿರರ ಮತ್ತು ವಿವಿಧ ವಿಭಾಗಗಳ ಆಫೀಸರರ ನಿರ್ದೇಶನಗಳ ಮತ್ತು ಮೇಲ್ನೋಟದ ಕೆಳಗೆ ಆಗಿರುವುವು. ಇಂತಹ ಜಮಾಅತುಗಳು ಸದರ್ ಅಂಜುಮನ್ ಅಹ್ಮದಿಯಾದ

ಶಾಖೆಯಾಗಿವೆ ಎಂಬ ಪ್ರಮಾಣ ಪತ್ರ (ಸರ್ಟಿಫಿಕೇಟ್) ಸದರ್ ಅಂಜುಮನ್ ಕಡೆಯಿಂದ ಲಭಿಸುವುದು.

**ನಿಯಮ ಕ್ರಮಾಂಕ 292:** ಜಮಾಅತಿನ ಎಲ್ಲ ಪುರುಷರ, ಮಹಿಳೆಯರ ಮತ್ತು ಮಕ್ಕಳ ಹೆಸರು ಮತ್ತು ಅವರಿಗೆ ಸಂಬಂಧಿಸಿದ ಮಾಹಿತಿಗಳನ್ನು ಅವುಗಳ ಫಾರಮ್‌ನಲ್ಲಿ ಒಂದು ರಿಜಿಸ್ಟರ್‌ನಲ್ಲಿ ದಾಖಲಿಸಬೇಕಾದುದು ಪ್ರತಿಯೊಂದು ಸ್ಥಳೀಯ ಜಮಾಅತಿನ ಕಡ್ಡಾಯ ಕರ್ತವ್ಯವಾಗಿದೆ. (ನಝಾರತ್ ಉಲ್ಯಾದ ಕಡೆಯಿಂದ ಕಳುಹಿಸಲಾದ ತಜ್‌ನೀದಿನ ಪ್ರೋಫಾರ್ಮವನ್ನು ತುಂಬಿಸಿ ಸ್ಥಳೀಯ ಜಮಾಅತಿನಲ್ಲಿ ಇರಿಸಬೇಕು ಮತ್ತು ಅದರ ಒಂದು ನಕಲು ಪ್ರತಿಯನ್ನು ನಝಾರತ್ ಉಲ್ಯಾಗೆ ಕಳುಹಿಸಬೇಕು.)

**ನಿಯಮ ಕ್ರಮಾಂಕ 293:** ಜಮಾಅತ್ ವ್ಯವಸ್ಥೆ ಮತ್ತು ಇಮಾರತಿನ ಕರ್ತವ್ಯಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ಸ್ಥಳೀಯ ಅಮೀರ್/ಸದರನ್ನು ಅನುಸರಿಸುವುದು ಸ್ಥಳೀಯ ಜಮಾಅತಿನ ವ್ಯಕ್ತಿಗಳ ಕರ್ತವ್ಯವಾಗಿದೆ.

**ನಿಯಮ ಕ್ರಮಾಂಕ 296:** ಒಂದಕ್ಕಿಂತ ಹೆಚ್ಚು ಸ್ಥಳೀಯ ಜಮಾಅತುಗಳನ್ನು ಸೇರಿಸಿ ಕ್ಷೇತ್ರೀಯ (ಹಲ್‌ಕಾ), ಜಿಲ್ಲಾ, ಪ್ರಾಂತ್ಯ, ರಾಜ್ಯ, ದೇಶೀಯ ಜಮಾಅತುಗಳ ವ್ಯವಸ್ಥೆ ಸ್ಥಾಪಿಸುವುದು ಅನುಮತನೀಯವಾದುದಾಗಿದೆ. ಈ ಸ್ಥಿತಿಯಲ್ಲಿ ಪ್ರತಿಯೊಂದು ವ್ಯವಸ್ಥೆ ಅದಕ್ಕಿಂತ ಮೇಲಿನ ವ್ಯವಸ್ಥೆಯ ಅಧೀನದಲ್ಲಾಗಿರುವುದು. ಈ ಎಲ್ಲ ವ್ಯವಸ್ಥೆಗಳು ಕೇಂದ್ರ ವ್ಯವಸ್ಥೆಯ ಅಧೀನದಲ್ಲಿ ಆಗಿರುವುವು.

**ನಿಯಮ ಕ್ರಮಾಂಕ 299:** ಪ್ರತಿಯೊಂದು ಸ್ಥಳೀಯ ಜಮಾಅತ್ ತಮ್ಮ ವಿವಿಧ ವಿಭಾಗಗಳ ಕಾರ್ಯ ಚಟುವಟಿಕೆಗಳ ಕುರಿತು ಅದಕ್ಕೆ ಸಂಬಂಧಿಸಿದ ಕೇಂದ್ರದ ವಿಭಾಗಗಳಿಗೆ ವಾರ್ಷಿಕ ರಿಪೋರ್ಟ್ ಕಳುಹಿಸಬೇಕು. ಅದಲ್ಲದೆ ಕೇಂದ್ರದ ಬೇಡಿಕೆ ಪ್ರಕಾರ ವರ್ಷದ ನಡುವೆ ಸಹ ರಿಪೋರ್ಟ್ ಕಳುಹಿಸುತ್ತಿರಬೇಕು. ನಝಾರತ್ ಉಲ್ಯಾದ ಕಡೆಯಿಂದ ಕಳುಹಿಸಲಾದ ಕಾರ್ಯ ಚಟುವಟಿಕೆಗಳ ಮಾಸಿಕ ರಿಪೋರ್ಟ್ ಫಾರ್ಮನ್ನು ನಿಯತವಾಗಿ ಕಳುಹಿಸಬೇಕು.

**ನಿಯಮ ಕ್ರಮಾಂಕ 300:** ತಮ್ಮ ಸ್ಥಳದಲ್ಲಿ ಒಂದು ಮಸೀದಿ ಮತ್ತು ಒಂದು ಲೈಬ್ರರಿಯ ವ್ಯವಸ್ಥೆ ಮಾಡಬೇಕೆಂದು ಪ್ರತಿಯೊಂದು ಸ್ಥಳೀಯ ಜಮಾಅತಿನಿಂದ ಪ್ರತೀಕ್ಷಿಸಲಾಗುತ್ತದೆ. ಮಸೀದಿ ಇಲ್ಲದ ಸ್ಥಿತಿಯಲ್ಲಿ ಜಮಾಅತಿನ ವ್ಯಕ್ತಿಗಳು

ಸಾಮೂಹಿಕ ನಮಾಝ್ (ಬಾಜಮಾಅತ್), ಜುಮುಅ ನಮಾಝ್ ನಿರ್ವಹಿಸಲು ಮತ್ತು ಇತರ ಕಾರ್ಯಕ್ರಮಕ್ಕಾಗಿ ಒಟ್ಟು ಸೇರಲು ವ್ಯವಸ್ಥೆ ಮಾಡಬೇಕಾದುದು ಸ್ಥಳೀಯ ಜಮಾಅತಿನ ಕರ್ತವ್ಯವಾಗಿದೆ.

**ನಿಯಮ ಕ್ರಮಾಂಕ 303:** ಕೇಂದ್ರದಿಂದ ಒಬ್ಬ ನಾಝಿರ್ ಪ್ರವಾಸ ಮಾಡುತ್ತಾ ಒಂದು ಜಮಾಅತಿಗೆ ಭೇಟಿ ನೀಡುವುದಾದರೆ, ಖಲೀಫತುಲ್ ಮಸೀಹರ ಪ್ರತಿನಿಧಿ ಎಂಬ ನೆಲೆಯಲ್ಲಿ ತಕ್ಕುದಾದ ಗೌರವಾದರದೊಂದಿಗೆ ಆವಶ್ಯಕವಾದ ವ್ಯವಸ್ಥೆಗಳನ್ನು ಮಾಡಬೇಕಾದುದು ಪ್ರತಿಯೊಂದು ಜಮಾಅತಿನ ಕರ್ತವ್ಯವಾಗಿದೆ.

**ಚುನಾವಣೆ**

**ನಿಯಮ ಕ್ರಮಾಂಕ 304:** ಸದರ್ ಅಂಜುಮನ್ ಅಹ್ಮದಿಯಾದ ವಿವಿಧ ವಿಭಾಗಗಳ ಉದ್ದೇಶ ಲಕ್ಷ್ಯಕ್ಕಾಗಿ ಸ್ಥಳೀಯ ಮಟ್ಟದಲ್ಲಿ ವಿವಿಧ ಹುದ್ದೇದಾರರನ್ನು ನಿಯಮಿಸಬೇಕು. ಈ ಹುದ್ದೇದಾರರು ಕೇಂದ್ರದ ವಿಭಾಗಗಳ ನಿರ್ದೇಶನಗಳ ಪ್ರಕಾರ ತಮ್ಮ ತಮ್ಮ ವಿಭಾಗಗಳಲ್ಲಿ ಅಮೀರ್/ಸದರಿನ ಕೆಳಗೆ ಕೆಲಸ ಮಾಡಬೇಕು ಮತ್ತು ಎಲ್ಲ ಆವಶ್ಯಕ ಹಾಗೂ ಯೋಗ್ಯವಾದ ರೆಕಾರ್ಡ್ ಇಡಬೇಕು. ಈ ಹುದ್ದೇದಾರರು ಸ್ಥಳೀಯ ಜಮಾಅತಿನ ಸಾಧಾರಣ ಮೀಟಿಂಗ್‌ನಲ್ಲಿ ಚುನಾಯಿತರಾಗುವರು. ಕೆಲಸದ ನೆಲೆ ಅನುಸಾರ ಒಂದಕ್ಕಿಂತ ಅಧಿಕ ಹುದ್ದೆಗಳನ್ನು ಒಬ್ಬ ವ್ಯಕ್ತಿಗೆ ಕೊಡಬಹುದಾಗಿದೆ. (ಇದು ನಿರ್ಬಂಧ ಘಟ್ಟದಲ್ಲಿ ಮಾತ್ರ ಮಾಡಬಹುದಾಗಿದೆ.

**ನಿಯಮ ಕ್ರಮಾಂಕ 306:** ಸ್ಥಳೀಯ ಜಮಾಅತ್ ತನ್ನ ಕೆಲಸಗಳನ್ನು ಸುಲಭವಾಗಿ ಮಾಡಲು ತನ್ನ ಅಧೀನದಲ್ಲಿ ಒಂದು ಸಮಿತಿಯನ್ನು ರಚಿಸುವುದು. ಅದರಲ್ಲಿ ಸ್ಥಳೀಯ ಎಲ್ಲ ಹುದ್ದೇದಾರರು ಸದಸ್ಯರಾಗುವರು. ಈ ಸಮಿತಿಯ ಹೆಸರು ಮಜ್ಲಿಸೆ ಆಮಿಲ ಎಂದಾಗಿರುವುದು. ಅದರ ಮುಖ್ಯ ಅಧಿಕಾರಿ ಸ್ಥಳೀಯ ಸದರ್ ಅಥವಾ ಅಮೀರ್ ಆಗಿರುವರು.

**ನಿಯಮ ಕ್ರಮಾಂಕ 307:** ಸ್ಥಳೀಯ ಜಮಾಅತಿನ ಮಜ್ಲಿಸೆ ಆಮಿಲದಲ್ಲಿ ಈ ಕೆಳಗಿನವರು ಸದಸ್ಯರಾಗುವರು. ಅಮೀರ್/ಸದರ್, ನಾಇಬ್ ಅಮೀರ್/ನಾಇಬ್ ಸದರ್, ಜನರಲ್ ಸೆಕ್ರೆಟರಿ, ಸೆಕ್ರೆಟರಿ ಇಸ್ಲಾಹೋ ಇರ್‌ಶಾದ್, ಎಡಿಶನಲ್ ಸೆಕ್ರೆಟರಿ ಇಸ್ಲಾಹೋ ಇರ್‌ಶಾದ್ (ಹೊಸದಾಗಿ ಬೈಅತ್ ಮಾಡಿದವರ ತರಬೇತಿಗೆ), ಎಡಿಶನಲ್ ಸೆಕ್ರೆಟರಿ ಇಸ್ಲಾಹೋ ಇರ್‌ಶಾದ್ (ತಅ್‌ಲೀಮುಲ್ ಖುರ್‌ಆನ್ ಮತ್ತು

ವಖ್‌ಫೆ ಆರ್‌ಝೀ) ಸೆಕ್ರೆಟರಿ ದಅ್‌ವತೆ ಇಲಲ್ಲಾಹ್, ಸೆಕ್ರೆಟರಿ ತಅ್‌ಲೀಮ್, ಸೆಕ್ರೆಟರಿ ಉಮೂರೆ ಆಮ್ಮ, ಸೆಕ್ರೆಟರಿ ಉಮೂರೆ ಖ಼ಾರ್‌ಜ, ಸೆಕ್ರೆಟರಿ ಮಾಲ್, ನಾಇಬ್ ಸೆಕ್ರೆಟರಿ ಮಾಲ್, ಸೆಕ್ರೆಟರಿ ವಸಾಯಾ, ಸೆಕ್ರೆಟರಿ ಝಿಯಾಫತ್, ಸೆಕ್ರೆಟರಿ ಜಾಈದಾದ್ ವ ಇಮ್‌ಲಾಕ್, ಸೆಕ್ರೆಟರಿ ತಸ್‌ನೀಫ್ ವ ಇಶಾಅತ್, ಎಡಿಶನಲ್ ಸೆಕ್ರೆಟರಿ ತಸ್‌ನೀಫ್ ವ ಇಶಾಅತ್ (ಎಂ.ಟಿ.ಎ.ಗೋಸ್ಕರ), ಸೆಕ್ರೆಟರಿ ಝಿರಾಅತ್, ಸೆಕ್ರೆಟರಿ ಸನ್‌ಅತೋ ತಿಜಾರತ್, ಸೆಕ್ರೆಟರಿ ತಹ್‌ರೀಕ್ ಜದೀದ್, ಸೆಕ್ರೆಟರಿ ವಖ್‌ಫೆ ಜದೀದ್, ಎಡಿಶನಲ್ ಸೆಕ್ರೆಟರಿ ವಖ್‌ಫೆ ಜದೀದ್ (ಹೊಸದಾಗಿ ಬೈಅತ್ ಮಾಡಿದವರ ತರಬೇತಿಗೆ), ಸೆಕ್ರೆಟರಿ ವಖ್‌ಫೆ ನೌ, ಸೆಕ್ರೆಟರಿ ರಿಶ್ತ ನಾತ, ಆಡಿಟರ್, ಇಮಾಮುಸ್ಸಲಾತ್, ಖಾಝೀ, ಅಮೀನ್, ಮುಹಾಸಿಬ್, ಝ಼ಈಮ್/ ಝ಼ಈಮ್ ಅಅ್‌ಲಾ ಅನ್ಸಾರುಲ್ಲಾಹ್, ಖಾಇದ್ ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ, ಜಮಾಅತಿನ ಮುರಬ್ಬಿ (ಮುಬಲ್ಲಿಗ್).

**ಸೂಚನೆ 1:** ಸ್ಥಳೀಯ ಜಮಾಅತಿನಲ್ಲಿ ಶಾಖಾ ಸಂಘಟನೆಯ ಝ಼ಈಮ್ ಅಥವಾ ಝ಼ಈಮ್ ಆಅ್‌ಲಾ ಮತ್ತು ಖಾಇದ್ ಖುದ್ದಾಮುಲ್ ಅಹ್ಮದಿಯಾ ಎರಡು ಅಥವಾ ಎರಡಕ್ಕಿಂತ ಹೆಚ್ಚಿದ್ದರೆ ಸಂಬಂಧಪಟ್ಟ ಶಾಖ ಸಂಘಟನೆಯ ಸದರ್ ಒಬ್ಬ ಪ್ರತಿನಿಧಿಯನ್ನು ಮಜ್ಲಿಸೆ ಆಮಿಲಕ್ಕಾಗಿ ನೇಮಿಸುವುದು.

**ಸೂಚನೆ 2:** ಸ್ಥಳೀಯ ಜಮಾಅತಿನಲ್ಲಿ ಎರಡು ಅಥವಾ ಎರಡಕ್ಕಿಂತ ಹೆಚ್ಚು ಮುಬಲ್ಲಿಗ್ ಇರುವುದಾದರೆ ನಾಝಿ಼ರ್ ಆಅ್‌ಲಾ ಮಜ್ಲಿಸೆ ಆಮಿಲಕ್ಕಾಗಿ ಒಬ್ಬ ಪ್ರತಿನಿಧಿಯನ್ನು ನಿಶ್ಚಯಿಸುವರು.

**ಸೂಚನೆ 3:** ಮಜ್ಲಿಸ್ ಆಮಿಲದ ಮೀಟಿಂಗಿನಲ್ಲಿ ಸಲಹೆಗಾಗಿ ಯಾರನ್ನಾದರೂ ಆಮಂತ್ರಿಸಲು ಅಮೀರ್/ ಸದರ್‌ಗೆ ಅಧಿಕಾರವಿದೆ. ಆದರೆ ಅವರು ಓಟು ಕೊಡುವ ಹಾಗಿಲ್ಲ.

**ಸೂಚನೆ 4:** ಸೆಕ್ರೆಟರಿ ವಸಾಯ ಮೂಸಿಯಾಗಿರಬೇಕು.

**ಸೂಚನೆ 5:** ಪ್ರತಿ ಟರ್ಮಿನ (ಕಾಲಾವಧಿ) ಆರಂಭದಲ್ಲಿ ಎಲ್ಲ ಜಿಲ್ಲಾ ಅಮೀರರು, ಲೋಕಲ್ ಅಮೀರರು, ಜಮಾಅತಿನ ಸದರರು ಜಮಾಅತಿನ ಕೆಲಸಗಳನ್ನು ಉತ್ತಮಗೊಳಿಸಲು ತಮ್ಮ ನಾಇಬ್‌ಗಳನ್ನು ನೇಮಿಸಬೇಕು. ಒಂದು ಅಥವಾ ಆವಶ್ಯಾನುಸಾರ ಎರಡು "ನಾಇಬ್"ಗಳನ್ನು ನೇಮಿಸಬಹುದಾಗಿದೆ. (WTT-3497/30-08-18)

**ನಿಯಮ ಕ್ರಮಾಂಕ 308:** ಅಮೀರ್ ಮತ್ತು ಇತರ ಹುದ್ದೇದಾರರ ಚುನಾವಣೆ ಮೂರು ವರ್ಷಕ್ಕೊಮ್ಮೆ ಆಗಿರುವುದು. ಆದರೆ ವಿಶೇಷವಾದ ಅವಸ್ಥೆಗಳಲ್ಲಿ ಕೇಂದ್ರದ ಅನುಮತಿ ಪಡೆದು ಮಧ್ಯೆದಲ್ಲಿ ಬದಲಾವಣೆ ಮಾಡಬಹುದಾಗಿದೆ. ಈ ಆಯ್ಕೆ ಅಥವಾ ನಿಶ್ಚಯ ಬಾಕಿ ಉಳಿದ ಅವಧಿಗೆ ಆಗಿರುವುದು.

**ನಿಯಮ ಕ್ರಮಾಂಕ 308A:** ಹಝ್ರತ್ ಖ಼ಲೀಫತುಲ್ ಮಸೀಹ್ ಖ಼ಾಮಿಸರ ನಿರ್ದೇಶನ ಪ್ರಕಾರ: "ಇನ್ನು ಮುಂದೆ ಸದರರು ಮತ್ತು ಲೋಕಲ್ ಅಮೀರರು ಎರಡು ಟರ್ಮುಗಳಿಗಿಂತ ಹೆಚ್ಚು ಬಾರಿ ಚುನಾಯಿತರಾಗುವಂತಿಲ್ಲ. ಆದರೆ ಈ ನಿಯಮ ಇತರ ಹುದ್ದೇದಾರರು ಮತ್ತು ಜಿಲ್ಲಾ ಅಮೀರರಿಗೆ ಅನ್ವಯಿಸುವುದಿಲ್ಲ.

ಆದ್ದರಿಂದ 2013 ರಿಂದ ನಿರಂತರ ಎರಡು ಬಾರಿ ಸದರಾಗಿ ಅಥವಾ ಲೋಕಲ್ ಅಮೀರಾಗಿ ಸೇವೆ ಸಲ್ಲಿಸುತ್ತಿರುವವರ ಹೆಸರು 2019ರ ಚುನಾವಣೆಯಲ್ಲಿ ಬರುವಂತಿಲ್ಲ.

**ನಿಯಮ ಕ್ರಮಾಂಕ 309:** ಜಮಾಅತಿನ ಕಾರ್ಯನೀತಿ ಪ್ರಕಾರ ಅವಧಿ ಮಧ್ಯೆ ಸಹ ಅಮೀರ್, ಅಮೀರ್ ಹಲ್ಕಾ, ಅಮೀರ್ ಜಿಲ್ಲೆ, ಪ್ರಾದೇಶಿಕ ಅಮೀರ್, ಸ್ಟೇಟ್ (ರಾಜ್ಯ) ಅಮೀರ್ ಮತ್ತು ನ್ಯಾಶನಲ್ ಅಮೀರನ್ನು ಕಾರಣ ತಿಳಿಸದೆ ಹುದ್ದೆಯಿಂದ ತೆಗೆಯಬಹುದಾಗಿದೆ. ಅದರ ಅನುಮತಿ (ಮಂಜೂರಾತಿ) ಖಲೀಫತುಲ್ ಮಸೀಹರಿಂದ ಪಡೆಯುವುದು ಆವಶ್ಯಕ. ಆದರೆ ಹುದ್ದೆಯಿಂದ ತೆಗೆದು ಹಾಕಿದ ಬಗ್ಗೆ ಸ್ಥಳೀಯ ಜಮಾಅತ್ ಅಥವಾ ವ್ಯಕ್ತಿಗೆ ಪ್ರಶ್ನಿಸುವ ಅನುಮತಿ ಇಲ್ಲ.

**ನಿಯಮ ಕ್ರಮಾಂಕ 310:** ಸದರ್ ಅಂಜುಮನ್ ಅಹ್ಮದಿಯಾದ ನಾಝಿರ್, ನಾಇಬ್ ನಾಝಿರ್ ಮತ್ತು ಅದರ ವಿವಿಧ ವಿಭಾಗಗಳ ಆಫೀಸರರು, ತಹ್‌ರೀಕ್ ಜದೀದಿನ ವಕೀಲರು (ಮೇಲಾಧಿಕಾರಿ), ನಾಇಬ್ ವಕೀಲರು ಮತ್ತು ಅದರ ವಿವಿಧ ವಿಭಾಗಗಳ ಆಫೀಸರರು, ವಖ್‌ಫೆ ಜದೀದಿನ ನಾಝಿಮ್ ಮತ್ತು ನಾಇಬ್ ನಾಝಿಮ್ ಯಾವುದೇ ಸ್ಥಳೀಯ ಹುದ್ದೆಗೆ ಆಯ್ಕೆ ಮಾಡಬಾರದು.

**ನಿಯಮ ಕ್ರಮಾಂಕ 311:** 1. ಸ್ಥಳೀಯ ಸದರಿನ ಆಯ್ಕೆ ಸ್ಥಳೀಯ ಜಮಾಅತಿನ ಬಹುಮತದ ಮೂಲಕವಾಗಿರುವುದು.

2. ಕೋರಮ್ ಒಟ್ಟು ಮತದಾರರ ಅರ್ಧದಷ್ಟು ಆಗಿರಬೇಕು. ಆದರೆ ಸ್ಪಷ್ಟವಾದ ಸೂಚನೆ ತಲುಪಿಸಲಾದ ನಂತರ ಮೊದಲ ಮೀಟಿಂಗಿನಲ್ಲಿ ಕೋರಮ್ ಪೂರ್ತಿಯಾಗದಿದ್ದರೆ ಎರಡನೇ ಮೀಟಿಂಗಿನಲ್ಲಿ ಕೋರಮ್ ಮೂರನೇ ಒಂದು ಭಾಗವಾಗಿರುವುದು.

**ನಿಯಮ ಕ್ರಮಾಂಕ 313:** ಬಜೆಟಿನಲ್ಲಿ ಇರುವ ಒಟ್ಟು ವ್ಯಕ್ತಿಗಳ ಸಂಖ್ಯೆಯಿಂದ ಸ್ತ್ರೀಯರನ್ನು ಮತ್ತು ವಿದ್ಯಾರ್ಥಿಗಳನ್ನು ಕಳೆದ ನಂತರ ಬಾಕಿಯುಳಿದ ಚಂದಾದಾರರಲ್ಲಿ (ಚಂದಾ ಪಾವತಿ ಮಾಡಲು ಬಾಕಿಯಿರುವ ಚಂದಾದಾರರನ್ನು ಸೇರಿಸಿ) ಕೋರಮ್ ನಿಶ್ಚಯಿಸ ಲಾಗುವುದು.

**ನಿಯಮ ಕ್ರಮಾಂಕ 314:** ಅಮೀರರ ಚುನಾವಣೆಯ ಸಮಯದಲ್ಲಿ ನಿಯಮಾನುಸಾರ (ಖಾಇದ ಪ್ರಕಾರ) ಚುನಾವಣೆಯಲ್ಲಿ ಭಾಗವಹಿಸಬಹುದಾದ ಪ್ರತಿಯೊಬ್ಬ ವ್ಯಕ್ತಿಗೆ ಹದಿನೈದು ದಿನಗಳ ಮುಂಚೆ ಚುನಾವಣೆಯ ನಿಶ್ಚಿತ ದಿನಾಂಕ, ಸಮಯ ಮತ್ತು ಸ್ಥಳದ ನೋಟಿಸ್ ನೀಡಿರಬೇಕು. ಈ ನೋಟಿಸಿನಲ್ಲಿ ಪ್ರತಿಯೊಬ್ಬ ವ್ಯಕ್ತಿಯ ಸಹಿ ಹಾಕಿಸಬೇಕು. ಚುನಾವಣೆಯ ಮೀಟಿಂಗಿನಲ್ಲಿ ಯಾವುದೇ ವ್ಯಕ್ತಿ ತಕ್ಕುದಾದ ಕಾರಣವಿಲ್ಲದೆ ಮತ್ತು ಸಮಯಕ್ಕೆ ಮುಂಚಿತವಾಗಿ ಸೂಚನೆ ಕೊಡದೆ ಗೈರು ಹಾಜರಿಯಾಗುವುದು ತಪ್ಪು. ಆದ್ದರಿಂದ ಯಾರಾದರೂ ಸೂಕ್ತವಾದ ಕಾರಣವಿಲ್ಲದೆ ಲಿಖಿತ ಸೂಚನೆ ಸಿಕ್ಕಿದ ನಂತರ ಗೈರು ಹಾಜರು ಆದರೆ ಅದರ ರಿಪೋರ್ಟ್ ನಝಾರತ್ ಉಲ್ಯಾಗೆ ಕಳುಹಿಸಲಾಗುವುದು.

**ನಿಯಮ ಕ್ರಮಾಂಕ 317:** ಪ್ರತಿ ಹುದ್ದೆಯ ಪ್ರಾಮುಖ್ಯತೆ ಮತ್ತು ಕರ್ತವ್ಯಗಳ ಅನುಸಾರ ಹುದ್ದೇದಾರರನ್ನು ಆಯ್ಕೆ ಮಾಡಬೇಕು. ಹೆಸರು ಸೂಚಿಸುವಾಗ ಯೋಗ್ಯತೆಗೆ ಯಾವಾಗಲೂ ಆದ್ಯತೆ ನೀಡಬೇಕು. ಬಿಡುವಿಲ್ಲದ (ಸಮಯ ನೀಡದ), ಸುಸ್ತಾದ, ಪ್ರಾಮಾಣಿಕನಲ್ಲದ, ಅಯೋಗ್ಯನಾದ ಅಥವಾ ಯಾವುದೇ ರೀತಿಯಲ್ಲಿ ಕೆಟ್ಟ ಮಾದರಿ ಹೊಂದಿರುವ ವ್ಯಕ್ತಿಯನ್ನು ಹೆಸರಿಗಾಗಿ ಮಾತ್ರ ಚುನಾಯಿಸಬಾರದು.

**ನಿಯಮ ಕ್ರಮಾಂಕ 318:** ಚುನಾವಣೆ ನಡೆಸುವಾಗ ಗಮನಿಸಬೇಕಾದುದೇನೆಂದರೆ, ಬಹಳ ನಿರ್ಬಂಧಿತ ಅವಸ್ಥೆಯಲ್ಲಿ ಹೊರತು ಒಬ್ಬನಿಗೆ ಒಂದಕ್ಕಿಂತ ಹೆಚ್ಚು ಹುದ್ದೆ ವಹಿಸಿಕೊಡಬಾರದು. ಕೆಲಸದ ಆಧಿಕ್ಯದ

ಕಾರಣ ಜಮಾಅತಿನ ಕೆಲಸಕ್ಕೆ ಅಡ್ಡಿ ಉಂಟಾಗದಂತೆ ಮಾಡಲು, ಕೆಲಸದಲ್ಲಿ ಕುಂದು ಕೊರತೆ ತಲೆದೋರದಿರಲು ಮತ್ತು ಹೆಚ್ಚು ಜನರು ತರಬೇತಿ ಪಡೆಯುವಂತೆ ಮಾಡಲು ಹೀಗೆ ವ್ಯವಸ್ಥೆ ಮಾಡಲಾಗಿದೆ.

**ನಿಯಮ ಕ್ರಮಾಂಕ 319:** ಕೆಳಗೆ ನೀಡಲಾದ ಹುದ್ದೇದಾರರ ಹೆಸರು ಪಟ್ಟಿ ಮಾತ್ರ ಮಂಜೂರಾತಿಗಾಗಿ ನಝೂರತ್ ಉಲ್ಯಾಗೆ ಬರಬೇಕು: ಅಮೀರ್/ಸದರ್, ನಾಇಬ್ ಅಮೀರ್/ನಾಇಬ್ ಸದರ್, ಜನರಲ್ ಸೆಕ್ರೆಟರಿ, ಸೆಕ್ರೆಟರಿ ಇಸ್ಲಾಹೋ ಇರ್‌ಶಾದ್, ಎಡಿಶನಲ್ ಸೆಕ್ರೆಟರಿ ಇಸ್ಲಾಹೋ ಇರ್‌ಶಾದ್ (ಹೊಸದಾಗಿ ಬೈಅತ್ ಮಾಡಿದವರ ತರಬೇತಿಗೆ), ಎಡಿಶನಲ್ ಸೆಕ್ರೆಟರಿ ಇಸ್ಲಾಹೋ ಇರ್‌ಶಾದ್ (ತಅ್‌ಲೀಮುಲ್ ಖುರ್‌ಆನ್ ಮತ್ತು ವಖ್‌ಫೆ ಆರ್‌ಝೀ) ಸೆಕ್ರೆಟರಿ ದಅ್‌ವತೆ ಇಲಲ್ಲಾಹ್, ಸೆಕ್ರೆಟರಿ ತಅ್‌ಲೀಮ್, ಸೆಕ್ರೆಟರಿ ಉಮೂರೆ ಆಮ್ಮ, ಸೆಕ್ರೆಟರಿ ಉಮೂರೆ ಖ಼ಾರ್‌ಜ, ಸೆಕ್ರೆಟರಿ ಮಾಲ್, ನಾಇಬ್ ಸೆಕ್ರೆಟರಿ ಮಾಲ್, ಸೆಕ್ರೆಟರಿ ವಸಾಯಾ, ಸೆಕ್ರೆಟರಿ ಝಿಯಾಫತ್, ಸೆಕ್ರೆಟರಿ ಜಾಈದಾದ್ ವ ಇಮ್‌ಲಾಕ್, ಸೆಕ್ರೆಟರಿ ತಸ್‌ನೀಫ್ ವ ಇಶಾಅತ್, ಎಡಿಶನಲ್ ಸೆಕ್ರೆಟರಿ ತಸ್‌ನೀಫ್ ವ ಇಶಾಅತ್ (ಎಂ.ಟಿ.ಎ. ಗೋಸ್ಕರ), ಸೆಕ್ರೆಟರಿ ಝಿರಾಅತ್, ಸೆಕ್ರೆಟರಿ ಸನ್‌ಅತೋ ತಿಜಾರತ್, ಸೆಕ್ರೆಟರಿ ರಿಶ್ತ ನಾತ, ಆಡಿಟರ್, ಇಮಾಮುಸ್ಸಲಾತ್, ಅಮೀನ್, ಮುಹಾಸಿಬ್.

**ಸೂಚನೆ ನಂ.1:** ಸೆಕ್ರಟರಿ ರಿಶ್ತ ನಾತಾದ ಚುನಾವಣೆಯ ರೀತಿಯನ್ನು ಕೊನೆಗೊಳಿಸಿ, ಆ ಕೆಲಸಕ್ಕೆ ಸೂಕ್ತ ವ್ಯಕ್ತಿಯ ಹೆಸರನ್ನು ಕೇಂದ್ರಕ್ಕೆ (ಮರ್ಕಝ್) ಕಳುಹಿಸಿ ಮಂಜೂರಾತಿ ಪಡೆಯಲು ಅಮೀರರಿಗೆ ಹಝ್ರತ್ ಖ಼ಲೀಫತುಲ್ ಮಸೀಹ್ ರಾಬಿಅ್ (ರಹ್ಮಹುಲ್ಲಾಹ್) ಅಧಿಕಾರ ನೀಡಿದ್ದರು.

**ಸೂಚನೆ ನಂ.2:** ಈ ಕೆಳಗಿನ ಹುದ್ದೇದಾರರ ಮಂಜೂರಾತಿಯನ್ನು ಅವರಿಗೆ ಸಂಬಂಧಿಸಿದ ಕಚೇರಿಗಳಿಂದ ಪಡೆಯಬೇಕು: ಖಾಝೀ, ಸೆಕ್ರೆಟರಿ ತಹ್‌ರೀಕ್ ಜದೀದ್, ಸೆಕ್ರೆಟರಿ ವಖ್‌ಫೆ ಜದೀದ್, ಸೆಕ್ರೆಟರಿ ವಖ್‌ಫೆ ನೌ, ಅನ್ಸಾರುಲ್ಲಾಹ್ ಮತ್ತು ಖ಼ುದ್ದಾಮುಲ್ ಅಹ್ಮದಿಯಾದ ಹುದ್ದೇದಾರರು.

**ನಿಯಮ ಕ್ರಮಾಂಕ 321:** ಚಂದಾ ಹಣವನ್ನು ವಸೂಲು ಮಾಡಲು ನೇಮಿಸಲ್ಪಟ್ಟ ಮುಹಸ್ಸಿಲ್‌ರಿಗೆ ಸ್ಥಳೀಯ ಜಮಾಅತ್ ಮಂಜೂರಾತಿ ನೀಡಬಹುದಾಗಿದೆ. ಆದರೆ ಅಂತಹವರ ಬಗ್ಗೆ ನಝೂರತ್ ಬೈತುಲ್ ಮಾಲ್‌ಗೆ

ವರದಿ ನೀಡಬೇಕು. ಏಕೆಂದರೆ ಸಮರ್ಪಕ ನೇಮಕವಾಗಿರದಿದ್ದರೆ ಅದನ್ನು ಸರಿಪಡಿಸಲು ಸಹಾಯಕವಾಗುವುದು.

**ನಿಯಮ ಕ್ರಮಾಂಕ 323:** ನಲ್ವತ್ತು ಅಥವಾ ನಲ್ವತ್ತಕ್ಕಿಂತ ಅಧಿಕ ಚಂದಾದಾರರು ಇರುವ ಸ್ಥಳೀಯ ಜಮಾಅತಿನ ವ್ಯವಹಾರಗಳನ್ನು ನೋಡಲು ಒಬ್ಬ ಖಾಝಿಯನ್ನು ನಿಶ್ಚಯಿಬೇಕಾದುದು ಆವಶ್ಯಕ. ಅಮೀರ್/ಸದರ್ ಅಥವಾ ಯಾವುದೇ ಹುದ್ದೇದಾರರಿಗೆ ಖಾಝಿಯ ಕರ್ತವ್ಯ ನಿರ್ವಹಿಸುವ ಅನುಮತಿ ಇಲ್ಲ.

**ಸೂಚನೆ 1:** ಆವಶ್ಯ ಅನುಸಾರ ಒಂದಕ್ಕಿಂತ ಅಧಿಕ ಖಾಝಿಯನ್ನು ನಿಶ್ಚಯಿಸಬಹುದಾಗಿದೆ.

**ಸೂಚನೆ 2:** ಖಲೀಫತುಲ್ ಮಸೀಹ್ ಖಾಮಿಸ್(ಅಯ್ಯದಹುಲ್ಲಾಹ್) ಭಾರತದ ಜಮಾಅತುಗಳಲ್ಲಿ ಮತ್ತು ಜಿಲ್ಲೆಗಳಲ್ಲಿ ಖಾಝಿಯರನ್ನು ನಿಶ್ಚಯಿಸುವ ಬಗ್ಗೆ ಒಂದು ಸಮಿತಿಯನ್ನು ನಿಶ್ಚಯಿಸಿರುವರು. ಆ ಸಮಿತಿ ಖಾಝಿಯರನ್ನು ನಿಶ್ಚಯಿಸಿ ಖಲೀಫರಿಂದ ಮಂಜೂರಾತಿ ಪಡೆಯುತ್ತಾರೆ.

**ಸೂಚನೆ 3:** ಆವಶ್ಯ ಅನುಸಾರ ಒಂದಕ್ಕಿಂತ ಅಧಿಕ ಇಮಾಮುಸ್ಸಲಾತನ್ನು ನಿಶ್ಚಯಿಸ ಬಹುದಾಗಿದೆ.

**ನಿಯಮ ಕ್ರಮಾಂಕ 324:** ಯಾರದಾದರೂ ಪರವಾಗಿ ಪ್ರಚಾರ (ಪ್ರಾಪ) ಮಾಡಲಾಗಿದೆ ಎಂದು ಒಬ್ಬ ಅಮೀರ್ ಅಥವಾ ಇತರ ಹುದ್ದೇದಾರರ ಕುರಿತು ದೂರು ಲಭಿಸಿ, ಆ ದೂರು ಸರಿಯಾದುದಾಗಿದೆ ಎಂದು ತನಿಖೆಯಿಂದ ಸಾಬೀತಾದರೆ ಆ ಚುನಾವಣೆಯನ್ನು ರದ್ದುಗೊಳಿಸಲಾಗುವುದು. ಪ್ರಚಾರ ಮಾಡಿದವರನ್ನು ಪ್ರಶ್ನಿಸಲಾಗುವುದು. ಚುನಾವಣೆ ಪುನಃ ನಡೆಸುವಾಗ ಅವರಿಗೆ ಮೀಟಿಂಗಲ್ಲಿ ಭಾಗವಹಿಸುವ ಅನುಮತಿ ಇರುವುದಿಲ್ಲ.

**ನಿಯಮ ಕ್ರಮಾಂಕ 325:** ಜಮಾಅತಿನ ವ್ಯಕ್ತಿಗಳು ಅಥವಾ ಒಬ್ಬ ವ್ಯಕ್ತಿ ಯಾವುದೇ ರೀತಿಯಲ್ಲಿ ಯಾವುದೇ ವ್ಯಕ್ತಿಯ ಪರವಾಗಿ ಅಥವಾ ಎದುರಾಗಿ ಅಭಿಪ್ರಾಯ ಹೇಳಲು ಪ್ರಯತ್ನಿಸುವುದು ಪ್ರಚಾರ ಎಂದು ಹೇಳಲಪಡುವುದು. ಆದರೆ ಮೀಟಿಂಗಿನ ಅಧ್ಯಕ್ಷರ ಅನುಮತಿಯಿಂದ ಚುನಾವಣೆಯ ಮೀಟಿಂಗಿನಲ್ಲಿ ನಿರ್ದೇಶಿಸಲ್ಪಟ್ಟ ವ್ಯಕ್ತಿಗಳ ಪರವಾಗಿ ಯುಕ್ತವಾದ ಪದಗಳಲ್ಲಿ ಸಂಕ್ಷಿಪ್ತವಾಗಿ

ಭಾಷಣ ಮಾಡಬಹುದಾಗಿದೆ. ಆದರೆ ಯಾರದೇ ವಿರುದ್ಧ ಭಾಷಣ ಮಾಡುವ ಅನುಮತಿ ಇಲ್ಲ.

**ನಿಯಮ ಕ್ರಮಾಂಕ 326:** ಈ ವಿಷಯದ ಬಗ್ಗೆ ಗಮನಹರಿಸಿರಿ. ಒಬ್ಬನು ಒಂದು ಹುದ್ದೆಗೆ ತನ್ನ ಹೆಸರು ಸೂಚಿಸಬಾರದು ಮತ್ತು ತನಗೆ ತಾನು ಓಟು ನೀಡಬಾರದು. ಒಬ್ಬನು ಒಂದು ಹುದ್ದೆಗೆ ತನ್ನ ಹೆಸರನ್ನು ಸೂಚಿಸುದುದು ಸಾಬೀತಾದರೆ ಅಥವಾ ತನಗೆ ತಾನು ಓಟು ನೀಡಿರುವುದಾಗಿ ಸಾಬೀತಾದರೆ ಅವನು ಆ ಹುದ್ದೆಗೆ ಚುನಾಯಿಸಲ್ಪಟಿಲ್ಲ ಎಂದು ಗಣಿಸಲ್ಪಡುವನು. ಅವನು ಬೇರೆ ಯಾವುದಾದರೂ ಹುದ್ದೆಯನ್ನು ಹೊಂದಿದ್ದರೆ ಅದರಿಂದ ಕೂಡ ಅವನನ್ನು ವಜಾ ಮಾಡಲಾಗುವುದು.

**ನಿಯಮ ಕ್ರಮಾಂಕ 327:** ಒಬ್ಬನು ತನ್ನ ವಯಸ್ಸಿಗನುಸಾರವಾಗಿ ಮಜ್ಲಿಸ್ ಅನ್‌ಸಾರುಲ್ಲಾಹ್ ಅಥವಾ ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾದ ಸದಸ್ಯನಾಗಿರದಿದ್ದರೆ ಅವನು ಯಾವುದೇ ಹುದ್ದೆಗೆ ನೇಮಿಸಲ್ಪಡಲು ಅರ್ಹನಾಗ ಲಾರನು.

**ನಿಯಮ ಕ್ರಮಾಂಕ 328:** ಚುನಾವಣೆಯ ಸಭೆಯಲ್ಲಿ ಹಾಜರಿದ್ದವರು ಓಟು ನೀಡಬೇಕಾದುದು ಕಡ್ಡಾಯವಾಗಿದೆ. ನಿಷ್ಪಕ್ಷನಾಗಿರುವುದಕ್ಕೆ ಅನುಮತಿ ಇಲ್ಲ.

**ನಿಯಮ ಕ್ರಮಾಂಕ 329:** ಈ ಕೆಳಗಿನವರು ಚುನಾವಣೆಯ ಸಭೆಯಲ್ಲಿ ಭಾಗವಹಿಸಲು ಅರ್ಹರಲ್ಲ:

1. ನಿಯಮ ಕ್ರಮಾಂಕ ಸಂಖ್ಯೆ 341ರಲ್ಲಿ ವಿವರಿಸಲ್ಪಡುವ ಹಾಗೆ ಕೇಂದ್ರದ ಮಂಜೂರಾತಿ ಪಡೆಯದೆ ಚಂದಾ ಬಾಕಿ ಮಾಡಿಕೊಂಡಿರುವವನು ಅದನ್ನು ಪಾವತಿ ಮಾಡದಿದ್ದರೆ.

2. ಮಹಿಳೆಯರು.

3. 18ವರ್ಷಕ್ಕಿಂತ ಕಡಿಮೆ ವಯಸ್ಸಿನವನು.

4. ಜಮಾಅತಿನ ಶಿಕ್ಷೆಗೆ ಗುರಿಯಾದವರು.

5. ತಮ್ಮ ಚಂದಾ ಹಣವನ್ನು ಜಮಾಅತಿನ ಮೂಲಕ ಕಳುಹಿಸದೆ ನೇರವಾಗಿ ಕಳುಹಿಸುವವರು.

6. ಪ್ರಾಪ್ತ ವಯಸ್ಕನಾದ ವಿದ್ಯಾರ್ಥಿಗಳು – ಅವರ ಖರ್ಚು ವೆಚ್ಚಗಳನ್ನು ತಂದೆ ತಾಯಂದಿರು ಮತ್ತು ರಕ್ಷಕರು ವಹಿಸುತ್ತಿದ್ದರೆ.

**ನಿಯಮ ಕ್ರಮಾಂಕ 330:** ಈ ಕೆಳಗಿನ ವ್ಯಕ್ತಿಗಳು ಯಾವುದೇ ಹುದ್ದೆಗಳಿಗೆ ಚುನಾಯಿಸಲ್ಪಡಲಾರರು:

ಅ. ನಿಯಮ ಕ್ರಮಾಂಕ 329 ಪ್ರಕಾರ ಓಟು ಕೊಡಲು ಅರ್ಹರಲ್ಲದವರು.

ಆ. ಕಡ್ಡಾಯ ಚಂದಾಗಳಲ್ಲಿ ಬಾಕಿಯಾದುದನ್ನು ಪಾವತಿ ಮಾಡದಿರಲು ಅನುಮತಿ ಪಡೆದವರು.

ಇ. ಖವಾಯದೆ ವಸಿಯ್ಯತ್ ಕ್ರಮಾಂಕ 72 ಪ್ರಕಾರ ಮೂಸಿಯ ವಸಿಯ್ಯತನ್ನು ಸದರ್ ಅಂಜುಮನ್ ಅಹ್ಮದಿಯಾ ರದ್ದುಗೊಳಿಸಿದರೆ.

ಈ. ಚಂದಾ ಹಣವನ್ನು ಸ್ವಂತ ಉಪಯೋಗಕ್ಕೆ ತರುವವನು.

**ಸೂಚನೆ:** ಒಬ್ಬ ವ್ಯಕ್ತಿ ಎರಡನೇ ಬಾರಿಗೆ ಯಾವುದೇ ರೀತಿಯ ಶಿಕ್ಷಾ ಕ್ರಮದ ಕಾರಣ ಹುದ್ದೆಯಿಂದ ವಜಾ ಮಾಡಲ್ಪಟ್ಟರೆ, ಆ ವ್ಯಕ್ತಿ ಪುನಃ ಎಂದಿಗೂ ಹುದ್ದೇದಾರನಾಗುವಂತಿಲ್ಲ.

**ನಿಯಮ ಕ್ರಮಾಂಕ 341:** ಚಂದಾ ಕೊಡುವವನೆಂದರೆ ನಿಯತವಾಗಿ ಕ್ರಮ ಪ್ರಕಾರ ಚಂದಾ ಕೊಡುವವನು, ಅವನ ಚಂದಾ ಆಮ್ ಮತ್ತು ಹಿಸ್ಸ ಆಮದ್ ಚಂದಾ ಆರು ತಿಂಗಳಿಗಿಂತ ಹೆಚ್ಚು ಕಾಲ ಬಾಕಿಯಾಗಿರಬಾರದು ಮತ್ತು ಅವನ ಜಲ್ಸಾ ಸಾಲಾನ ಚಂದಾ ಒಂದು ವರ್ಷಕ್ಕಿಂತ ಹೆಚ್ಚು ಕಾಲ ಬಾಕಿಯಾಗಿರುವುದಿಲ್ಲ.

**ನಿಯಮ ಕ್ರಮಾಂಕ 341A: "ನಾಸಿರ್"** (ನಲ್ವತ್ತು ವರ್ಷಕ್ಕಿಂತ ಮೇಲ್ಪಟ್ಟ ಜಮಾಅತಿನ ಸಹೋದರ) ಅಥವಾ "**ಖ಼ಾದಿಮ್**" ತಮ್ಮ ತಮ್ಮ ಶಾಖಾ ಸಂಘಟನೆಗಳ ಚಂದಾ ಬಾಕಿ ಮಾಡಿಕೊಂಡಿರುವರಾದರೆ (ಎಂದರೆ, ಖುದ್ದಾಮ್ ಚಂದಾ ಅಥವಾ ಅನ್ಸಾರ್ ಚಂದಾ)ಅವರು ಶಾಖಾ ಸಂಘಟನೆಯ ಮತ್ತು ಜಮಾಅತಿನ ಹುದ್ದೇದಾರರಾಗುವಂತಿಲ್ಲ. (WTT-1033/15-03-17)

ಆದ್ದರಿಂದ ಭಾರತದ ಜಮಾಅತುಗಳಲ್ಲಿ ಏಪ್ರಿಲ್ 2019ರಲ್ಲಿ ನಡೆಯಲಿರುವ ಎಲ್ಲ ಚುನಾವಣೆಗಳಲ್ಲಿ ಜಮಾಅತಿನ ಕಡ್ಡಾಯ ಚಂದಾಗಳು ಮತ್ತು ಚಂದಾ ಜಲಸಾ ಸಾಲಾನಾದೊಂದಿಗೆ ಶಾಖಾ ಸಂಘಟನೆಗಳ 6 ತಿಂಗಳುಗಳಿಗಿಂತ ಹೆಚ್ಚಿಗೆ

ಮತ್ತು ಚಂದಾ ಇಜ್‌ತಿಮಾ ಒಂದು ವರ್ಷಕ್ಕಿಂತ ಹೆಚ್ಚಿಗೆ ಬಾಕಿ ಇರುವವರು ಜಮಾಅತಿನ ಯಾವುದೇ ಹುದ್ದೇದಾರರಾಗುವಂತಿಲ್ಲ. ಎಲ್ಲ ಅಮೀರ್ ಮತ್ತು ಜಮಾಅತ್ ಸದರರು ಈ ನಿಯಮಗಳನ್ನು ಮುಂದಿರಿಸಿ ಸೆಕ್ರಟರಿ ಮಾಲ್‌ರಿಂದ ವೋಟರ್ ಲಿಸ್ಟ್ ತಯಾರು ಮಾಡಿಸಬೇಕು.

**ನಿಯಮ ಕ್ರಮಾಂಕ 342:** ಯಾರಾದರೂ ತನ್ನ ಚಂದಾದ ಬಗ್ಗೆ ಕಾಲಾವಕಾಶವನ್ನು ಸಂಬಂಧಪಟ್ಟ ವಿಭಾಗದಿಂದ ಪಡೆದಿದ್ದರೆ ಅವನಿಗೆ ನೀಡಲಾದ ಕಾಲಾವಕಾಶದ ತನಕ ಅವನು ಈ ನಿಯಮದಿಂದ ವಿನಾಯಿತಿ ಪಡೆಯುವನು.

**ನಿಯಮ ಕ್ರಮಾಂಕ 344:** ಕಡ್ಡಾಯ ಚಂದಾ ಬಾಕಿ ಮಾಡಿಕೊಂಡಿರುವವನು ಕ್ಷಮೆಯನ್ನು ಪಡೆದು ಐದು ವರ್ಷಗಳ ಕಾಲ ನಿಯತವಾಗಿ ಕಡ್ಡಾಯ ಚಂದಾ ಪಾವತಿಸುವುದಾದರೆ ಅವನನ್ನು ಹುದ್ದೆದಾರನಾಗಿ ಚುನಾಯಿಸಬಹುದು ಅಥವಾ ನಿಶ್ಚಯಿಸಬಹುದು.

**ನಿಯಮ ಕ್ರಮಾಂಕ 345:** ಕೇಂದ್ರದ ಅನುಮತಿ ಪಡೆದು ಶರಹ್‌ಗಿಂತ ಕಡಿಮೆ ಚಂದಾ ಕೊಡುವವರಿಗೆ ಓಟು ನೀಡುವ ಹಕ್ಕಿದೆ. ಆದರೆ ಅವರನ್ನು ಹುದ್ದೆಗೆ ಆಯ್ಕೆ ಮಾಡುವುದು ಮತ್ತು ನೇಮಿಸುವುದು ಕೇಂದ್ರದ ಅನುಮತಿ ಪ್ರಕಾರವಾಗಿರುವುದು.

**ಹುದ್ದೇದಾರರ ಮಂಜೂರಾತಿ:**

**ನಿಯಮ ಕ್ರಮಾಂಕ 346:** ಕೇಂದ್ರ ನೇಮಿಸುವ ಸ್ಥಳೀಯ ಹುದ್ದೇದಾರರನನ್ನು ಹುದ್ದೆಯಿಂದ ತೆಗೆದುಹಾಕುವ ಅಧಿಕಾರ ಕೇಂದ್ರದ್ದಾಗಿದೆ. ಆದರೆ ಅಮೀರ್ ಯಾವುದಾದರೂ ಹುದ್ದೇದಾರರನ್ನು ತೆಗೆದುಹಾಕುವ ಬಗ್ಗೆ ಕೇಂದ್ರಕ್ಕೆ ಶಿಫಾರಸ್ಸು ಮಾಡಬಹುದಾಗಿದೆ. ಯಾವುದಾದರೂ ಹುದ್ದೇದಾರನನ್ನು ಕೇಂದ್ರದ ತೀರ್ಪು ದೊರಕುವ ತನಕ ಹಂಗಾಮಿಯಾಗಿ ತೆಗೆದುಹಾಕಲು ಅಮೀರರಿಗೆ ಅಧಿಕಾರವಿದೆ.

**ನಿಯಮ ಕ್ರಮಾಂಕ 347:** ಸ್ಥಳೀಯ ಹುದ್ದೇದಾರರನ್ನು ಸ್ಥಳೀಯ ಜಮಾಅತ್‌ನಲ್ಲಿ ನಡೆಸಲಾದ ಚುನಾವಣೆ, ಸ್ಥಳೀಯ ಅಮೀರರ ಸಲಹೆ ಮೂಲಕ ನಾಝಿರ್ ಅಲ್‌ಲಾ ನೇಮಿಸುವರು. ಯಾವುದಾದರೂ ಕಾರಣದಿಂದ ಚುನಾಯಿಸಲ್ಪಟ್ಟವನಿಗೆ ಮಂಜೂರಾತಿ ನೀಡದಿರುವ ಅಧಿಕಾರ ನಾಝಿರ್ ಅಲ್‌ಲಾರವರಿಗೆ ಇದೆ. ಯಾವುದೇ ಕಾರಣವನ್ನು ಸ್ಪಷ್ಟಪಡಿಸದೆ ಯಾವುದೇ

ಹುದ್ದೇದಾರರನ್ನು ಹುದ್ದೆಯಿಂದ ತೆಗೆದುಹಾಕಲು ಮತ್ತು ಹೊಸದಾಗಿ ಚುನಾವಣೆ ನಡೆಸಲು ಆದೇಶ ನೀಡಲು ಮತ್ತು ಅಸಾಧಾರಣವಾದ ಸಂದರ್ಭದಲ್ಲಿ ಹುದ್ದೇದಾರನನ್ನು ಹೆಸರಿಸಲು ಸಹ ನಾಝಿರ್ ಅಲ್‌ಲಾರಿಗೆ ಅಧಿಕಾರವಿದೆ.

**ವಿಶೇಷ ಸೂಚನೆ:** ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಖಾದಿಯಾನಿನಲ್ಲಿ ಒಂದು ಮರ್ಕಝಿ ಇನ್‌ತಿಖಾಬ್ ಕಮಿಟಿ (ಕೇಂದ್ರೀಯ ಚುನಾವಣೆ ಸಮಿತಿ) ನಿಶ್ಚಯಿಸಿದ್ದಾರೆ. ಅದರ ಅಧ್ಯಕ್ಷ ನಾಝಿರ್ ಆಅ್‌ಲಾ ಆಗಿರುವರು. ಸದರ್ ಮತ್ತು ಸೆಕ್ರೆಟರಿಯರ ಆಯ್ಕೆಯ ಮಂಜೂರಾತಿ ಈ ಸಮಿತಿಯ ಮೂಲಕ ನೀಡಲಾಗುತ್ತದೆ.

**ನಿಯಮ ಕ್ರಮಾಂಕ 350:** ಒಂದು ಜಮಾಅತಿನಲ್ಲಿ ಯಾವುದಾದರೂ ಹುದ್ದೆಗೆ ಚಂದಾ ಬಾಕಿ ಮಾಡಿಕೊಂಡಿರುವವನನ್ನು ನಿರ್ವಾಹವಿಲ್ಲದೆ ನಿಶ್ಚಯಿಸ ಬೇಕಾಗಿ ಬಂದರೆ, (ವಸಿಯ್ಯತ್ ಬಾಕಿ ಮಾಡಿಕೊಂಡಿರುವವನ ಬಾಕಿ ಚಂದಾ ಕ್ಷಮಾಪಣೆ ಮಾಡಲಾಗುವುದಿಲ್ಲ.) ಆ ಹುದ್ದೇದಾರನಿಂದ ಹೀಗೆ ಲಿಖಿತ ಪ್ರತಿಜ್ಞೆ ಮಾಡಿಸಲಾಗುವುದು: ನಾನು ನನ್ನ ಬಾಕಿ ಚಂದಾವನ್ನು ಯುಕ್ತ ಮತ್ತು ನಿಶ್ಚಿತ ಕಂತುಗಳಲ್ಲಿ ನಿಯತವಾಗಿ ಪಾವತಿ ಮಾಡುತ್ತಾ ಇರುವೆನು." ಈ ಕಂತುಗಳ ಮಂಜೂರಾತಿಯನ್ನು ಸ್ಥಳೀಯ ಅಮೀರ್/ಸದರ್ ಅಥವಾ ಸಂಬಂಧಪಟ್ಟ ವಿಭಾಗದಿಂದ ಪಡೆದಿರಬೇಕು. ಆದರೆ ಚಂದಾ ಬಾಕಿ ಮಾಡಿಕೊಂಡಿರುವವನು ತನ್ನ ಬಾಕಿ ಚಂದಾವನ್ನು ಪಾವತಿಸಲು ಸಂಪೂರ್ಣವಾಗಿ ಅಸಮರ್ಥನಾಗಿದ್ದರೆ ಅದರ ಕಾರಣಗಳನ್ನು ವಿಶದವಾಗಿ ಖಲೀಫರ ಮುಂದಿರಿಸಿ ಕ್ಷಮಾಪಣೆ ಪಡೆಯಬಹುದು.

**ನಿಯಮ ಕ್ರಮಾಂಕ 354:** ಚುನಾಯಿತರಾದ ಹೊಸ ಹುದ್ದೇದಾರರ ಹೆಸರು ಪಟ್ಟಿ ಅವರ ಪೂರ್ಣ ವಿಳಾಸದೊಂದಿಗೆ ನಾಝಿರ್ ಅಲ್‌ಲಾರವರ ಕಚೇರಿಗೆ ತಲುಪಿಸುವುದು ಆವಶ್ಯಕ. ಹೊಸ ಹುದ್ದೇದಾರರ ಮಂಜೂರಾತಿಯ ಬಗ್ಗೆ ಮಾಹಿತಿ ದೊರಕುವ ತನಕ ಹಿಂದೆ ಇದ್ದ ಹುದ್ದೇದಾರರೇ ಕಾರ್ಯ ನಿರ್ವಹಿಸುವರು.

**ಇತರ ವಿಷಯಗಳು:**

**ನಿಯಮ ಕ್ರಮಾಂಕ 355:** ಹೊಸ ಹುದ್ದೇದಾರರ ಮಂಜೂರಾತಿ ಲಭಿಸಿದ

ಕೂಡಲೆ ಹಿಂದೆ ಇದ್ದ ಹುದ್ದೇದಾರರು ಎಲ್ಲ ದಾಖಲೆಗಳ ಸಮೇತ ಪೂರ್ಣವಾಗಿ ತಮ್ಮ ಕೆಲಸದ ಅಧಿಕಾರ ಹೊಸ ಹುದ್ದೇದಾರರಿಗೆ ವಹಿಸಿಕೊಡಬೇಕು. ಹೊಸ ಹುದ್ದೇದಾರರು ತಮ್ಮ ಹುದ್ದೆ ವಹಿಸಿಕೊಂಡು ಎರಡು ವಾರದೊಳಗೆ ಹಿಂದಿನ ವರ್ಷದ ವರದಿಗಳನ್ನು ಹಿಂದಿನ ಹುದ್ದೇದಾರರಿಂದ ಪಡೆದುಕೊಂಡು ಕೇಂದ್ರದ ವಿಭಾಗಗಳಿಗೆ ಕಳುಹಿಸಬೇಕು. ಹೀಗೆ ಮಾಡದಿದ್ದರೆ ಇದರ ಜವಾಬ್ದಾರಿ ಅವರ ಮೇಲೆ ಹೊರಿಸಲ್ಪಡುವುದು.

**ನಿಯಮ ಕ್ರಮಾಂಕ 363:** ಜಮಾಅತುಗಳಿಗೆ ಪತ್ರಗಳನ್ನು ಸೆಕ್ರಟರಿಯ ಹೆಸರಲ್ಲಿ ಕಳುಹಿಸಬಹುದಾಗಿದೆ. ಈ ಸ್ಥಿತಿಯಲ್ಲಿ ಅದರ ನಕಲು ಪ್ರತಿ ಅಮೀರ್/ಸದರ್‌ಗೆ ಕಳುಹಿಸಲಾಗುವುದು.

**ನಿಯಮ ಕ್ರಮಾಂಕ 364:** ಅಮೀರ್/ಸದರ್ ತನ್ನ ಜಮಾಅತಿನಿಂದ ಹೊರಗೆ ಹೋಗುವ ಮುಂಚಿತವಾಗಿ ನಾಝಿರ್ ಆಲ್‌ಲಾರಿಂದ ಅನುಮತಿ ಪಡೆದು ತನ್ನ ಪ್ರತಿನಿಧಿಯನ್ನು ನಿಶ್ಚಯಿಸಬೇಕು.

ಖಾಇಮ್ ಮಖಾಮಿನ ನೇಮಕದ ಕುರಿತು ಆವಶ್ಯಕ ನಿರ್ದೇಶನ: ಭಾರತದ ಜಮಾಅತುಗಳಲ್ಲಿ ಜಿಲ್ಲಾ ಅಮೀರರ, ಲೋಕಲ್ ಅಮೀರರ ಮತ್ತು ಜಮಾಅತ್ ಅಮೀರರ ನೇಮಕಾತಿ ಬಗ್ಗೆ ಹಝ್ರತ್ ಖ಼ಲೀಫತುಲ ಮಸೀಹ್ ಖ಼ಾಮಿಸ್ (ಅಯ್ಯದಹುಲ್ಲಾಹ್) ಈ ಕೆಳಗಿನ ನಿರ್ದೇಶನಗಳನ್ನು ನೀಡಿರುವರು:

1. ಖಾಇಮ್ ಮಖಾಮ್ ಅಮೀರ್ ಜಮಾಅತ್ ಮತ್ತು ಖಾಇಮ್ ಮಖಾಮ್ ಜಿಲ್ಲಾ ಅಮೀರ್ ದೇಶದೊಳಗೆ ಎಲ್ಲಿಯಾದರೂ ಒಂದು ವಾರದ ರಜೆಗಾಗಿ ಅನುಮತಿ ಪಡೆದು ಹೋಗುವರಾದರೆ ನಾಝಿರ್ ಆಲ್‌ಲಾ ಖಾದಿಯಾನ್ ಅವರಿಗೆ ಖಾಇಮ್ ಮಖಾಮನ್ನು ನಿಶ್ಚಯಿಸಬಹುದು. ಆದರೆ ಒಂದು ವಾರಕ್ಕಿಂತ ಹೆಚ್ಚಿನ ಕಾಲಕ್ಕೆ ದೇಶದೊಳಗೆ ಎಲ್ಲಿಯಾದರೂ ರಜೆ ಪಡೆದು ಹೋಗಲಿದ್ದರೆ ಖ಼ಲೀಫತುಲ್ ಮಸೀಹರಿಂದ ಮಂಜೂರಾತಿ ಪಡೆಯುವುದು ಆವಶ್ಯ. ಅದೇ ರೀತಿಯಲ್ಲಿ ವಿದೇಶಕ್ಕೆ ಹೋಗಲಿದ್ದರೆ ಖ಼ಲೀಫತುಲ್ ಮಸೀಹರಿಂದಲೇ ಮಂಜೂರಾತಿ ಪಡೆಯಬೇಕು.

2. "ಜಮಾಅತ್ ಸದರ್" ದೇಶದೊಳಗೆ ಅಥವಾ ವಿದೇಶಕ್ಕೆ ರಜೆ ಪಡೆದು ಹೋಗುವುದಾದರೆ ಖಾಇಮ್ ಮಖಾಮಿನ ಮಂಜೂರಾತಿ ನಾಝಿರ್ ಅಲ್‌ಲಾ ನೀಡುವರು. ಅದಕ್ಕಾಗಿ ಸಂಬಂಧಪಟ್ಟ ಸದರಿನ ಆಮಿಲಾದ ಕೆಲವು ಸೀನಿಯರ್ ಮೆಂಬರರ ಹೆಸರು ನಾಝಿರ್ ಆಲ್‌ಲಾರಿಗೆ ಕಳುಹಿಸಬೇಕು.

**ನೋಟ್:** ಉತ್ತರ ಇಂಡಿಯಾದ ಜಮಾಅತುಗಳಿಗೆ ನಾಝಿರ್ ಅಲ್‌ಲಾ ಮತ್ತು ದಕ್ಷಿಣ ಭಾರತದ ಜಮಾಅತುಗಳಿಗೆ ಎಡಿಶನಲ್ ನಾಝಿರ್ ಅಲ್‌ಲಾ ದಕ್ಷಿಣ ಭಾರತ ಮಂಜೂರಾತಿ ನೀಡುವರು. (WTT-3714/21-04-16)

**ಅಮೀರರ ಚುನಾವಣೆಗೆ ಸಂಬಂಧಿಸಿದ ನಿಯಮಗಳು**

ಹಝ್‌ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹ್ ಭಾರತದ ಜಮಾಅತುಗಳಲ್ಲಿ ಇಮಾರತ್ ನಿಝಾಮ್ ಸ್ಥಾಪಿಸುವುದಕ್ಕೆ ಸಂಬಂಧಿಸಿ ಹೀಗೆ ನಿರ್ದೇಶಿಸಿರುವರು:

ಅಮೀರರ ಚುನಾವಣೆಗೆ ಭಾಗವಹಿಸಬೇಕಾದ ಚಂದಾ ನೀಡುವವರ ಕನಿಷ್ಠ ಸಂಖ್ಯೆ ನಲ್ವತಕ್ಕೆ ಬದಲಾಗಿ ಐವತ್ತೆಂದು ನಿರ್ಧರಿಸಲಾಗಿದೆ. ಅವರಲ್ಲಿ ಡಾಕ್ಟರ್, ಅಧ್ಯಾಪಕರು, ವಕೀಲರು ಮೊದಲಾದವರಿರಬೇಕೆಂಬ ನಿಬಂಧನೆ ಸಹ ಈಡೇರಿಸುವಂತಿರಬೇಕು ಮತ್ತು ಅದರ ಬಗ್ಗೆ ಮಂಜೂರಾತಿ ಖಲೀಫತುಲ್ ಮಸೀಹರಿಂದ ಪಡೆದಿರಬೇಕು. (ಹುಝೂರರ ಪತ್ರ QND - 0314/06.02.2008)

ಈ ನಿರ್ದೇಶನದ ಪ್ರಕಾರ ಕೆಲವು ಜಮಾಅತ್‌ಗಳ ವಿವರಗಳನ್ನೊಳಗೊಂಡ ವರದಿಯನ್ನು ಹುಝೂರರಿಗೆ ಸಮರ್ಪಿಸಿದಾಗ ಹುಝೂರರು ಕೆಲವು ಜಮಾಅತ್‌ಗಳಲ್ಲಿ ಹೊಸದಾಗಿ ಇಮಾರತ್ ನಿಝಾಮ್ ಸ್ಥಾಪಿಸಲು ಮಂಜೂರಾತಿ ನೀಡಿದರು. ಈ ಜಮಾಅತ್‌ಗಳಲ್ಲಿ 2010ರಿಂದ ಇಮಾರತ್ ನಿಝಾಮ್ ಜಾರಿಗೊಂಡಿತು.

* * * * * * * * * * * * *

**ಇಮಾರತ್ ವ್ಯವಸ್ಥೆಯನ್ನು ಮಜ್ಲಿಸ್ ಇಂತಿಖಾಬ್ (ಆಯ್ಕೆ ಸಮಿತಿ) ಮೂಲಕ ನಡೆಸಲಾಗುವುದು**

**ನಿಯಮ ಕ್ರಮಾಂಕ 331:** ಅಮೀರ್, ಸೆಕ್ರಿಟರಿಗಳು, ಮುಹಾಸಿಬ್, ಆಡಿಟರ್ ಇವರನ್ನು ನೇರವಾಗಿ ಆಯ್ಕೆ ಮಾಡಲಾಗದು. ಅವರನ್ನು "ಮಜ್ಲಿಸೆ ಇಂತಿಖಾಬ್" (ಆಯ್ಕೆ ಸಮಿತಿ) ಮೂಲಕ ಆಯ್ಕೆ ಮಾಡಲಾಗುವುದು. ಅವರನ್ನು ಈ ಕೆಳಗಿನ ನಿಬಂಧನೆಗಳ ಪ್ರಕಾರ ಚಂದಾ ನೀಡುವವರು ಚುನಾಯಿಸುವರು:

1. ಚಂದಾ ಕೊಡುವವರ ಸಂಖ್ಯೆ 50ರಿಂದ 100ರ ತನಕ ಇದ್ದರೆ ಆಯ್ಕೆ ಸಮಿತಿಯ ಮೆಂಬರ್‌ಗಳ ಸಂಖ್ಯೆ ಒಟ್ಟು ಹದಿನೊಂದು(11) ಎಂದು ನಿಗದಿಪಡಿಸಲಾಗಿದೆ. ನೂರು ಚಂದಾದಾರರಿಗಿಂತ ಹೆಚ್ಚು ಚಂದಾದಾರರಿದ್ದರೆ

ಪ್ರತಿ 25 ಚಂದಾದಾರರ ಪರವಾಗಿ ಒಬ್ಬ ಸದಸ್ಯನನ್ನು ಆಯ್ಕೆ ಸಮಿತಿಗೆ ನೇಮಿಸಲಾಗುವುದು. ಉದಾಹರಣೆಗೆ, ಚಂದಾ ನೀಡುವವರ ಸಂಖ್ಯೆ 200 ಆಗಿದ್ದರೆ 15 ಜನರನ್ನು ಆಯ್ಕೆ ಸಮಿತಿಗೆ ಚುನಾಯಿಸಲಾಗುವುದು. ಈ ಜನರೆಲ್ಲರೂ ಅರುವತ್ತು ವರ್ಷಕ್ಕಿಂತ ಕಡಿಮೆ ಪ್ರಾಯದವರಾಗಿರಬೇಕು.

2. ಅರುವತ್ತು ವರ್ಷಕ್ಕಿಂತ ಹೆಚ್ಚು ಪ್ರಾಯದ ಚಂದಾದಾರರು ಬೈಅತ್ ಮಾಡಿದ ನಂತರ ಹತ್ತು ವರ್ಷಗಳ ಕಾಲ ದಾಟಿ ಹೋಗಿದ್ದರೆ ಮತ್ತು ಅವರ ಸಂಖ್ಯೆ ಅರುವತ್ತು ವರ್ಷ ಪ್ರಾಯಕ್ಕಿಂತ ಕಡಿಮೆ ಇರುವ ಆಯ್ಕೆ ಸಮಿತಿಗೆ ಚುನಾಯಿಸಿದ ಸದಸ್ಯರ ಸಂಖ್ಯೆಗೆ ಸಮವಾಗಿದ್ದರೆ ಅಥವಾ ಕಡಿಮೆ ಇದ್ದರೆ ಅವರೆಲ್ಲರೂ ಚುನಾವಣೆ ಇಲ್ಲದೆ ಆಯ್ಕೆ ಸಮಿತಿಯ ಸದಸ್ಯರಾಗುವರು. ಅರುವತ್ತು ವರ್ಷ ಪ್ರಾಯ ದಾಟಿದವರ ಸಂಖ್ಯೆ ಆಯ್ಕೆ ಸಮಿತಿಗೆ ಅರುವತ್ತು ವರ್ಷಕ್ಕಿಂತ ಕಡಿಮೆ ಪ್ರಾಯದ ಚುನಾಯಿಸಲ್ಪಟ್ಟ ಸದಸ್ಯರ ಸಂಖ್ಯೆಗಿಂತ ಹೆಚ್ಚಾಗಿದ್ದರೆ ಅವರಿಂದ ಆಯ್ಕೆ ಸಮಿತಿಗೆ ಅರುವತ್ತು ವರ್ಷ ಪ್ರಾಯಕ್ಕಿಂತ ಕಡಿಮೆ ಇರುವವರು ಚುನಾಯಿಸಿದಷ್ಟು ಸದಸ್ಯರನ್ನು ಚುನಾಯಿಸಿ ನೇಮಿಸಲಾಗುವುದು.

ಉದಾಹರಣೆಗೆ, ಚಂದಾ ಕೊಡುವವರ ಸಂಖ್ಯೆಗೆ ಅನುಸಾರವಾಗಿ ಆಯ್ಕೆ ಸಮಿತಿಗೆ 15 ಜನರನ್ನು ಅರುವತ್ತು ವರ್ಷಕ್ಕಿಂತ ಕಡಿಮೆ ಪ್ರಾಯದವರಿಂದ ಆರಿಸಿದರೆ ಮತ್ತು ಅರುವತ್ತು ವರ್ಷಕ್ಕಿಂತ ಹೆಚ್ಚು ಪ್ರಾಯದವರ ಸಂಖ್ಯೆ 20 ಅಥವಾ 25 ಆಗಿದ್ದರೆ ಅವರ ಪೈಕಿ 15 ಜನರನ್ನು ಮಾತ್ರ ಆಯ್ಕೆ ಸಮಿತಿಗೆ ಚುನಾಯಿಸಲಾಗುವುದು. ಹೀಗೆ ಚುನಾವಣೆ ನಡೆಸುವಾಗ ಎಲ್ಲ ಚಂದಾ ನೀಡುವವರು ಚುನಾವಣೆಯಲ್ಲಿ ಓಟು ಕೊಡುವರು. ಎಂದರೆ, ಅರುವತ್ತು ವರ್ಷ ಪ್ರಾಯಕ್ಕಿಂತ ಕಡಿಮೆ ಪ್ರಾಯದ ಚಂದಾದಾರರಾದ ಸದಸ್ಯರ ಪಟ್ಟಿಯನ್ನೂ ಅರುವತ್ತು ವರ್ಷಕ್ಕಿಂತ ಹೆಚ್ಚು ಪ್ರಾಯದ ಚಂದಾದಾರರಾದ ಸದಸ್ಯರ ಪಟ್ಟಿಯನ್ನೂ ಬೇರೆ ಬೇರೆ ರಚಿಸಬೇಕು. ಆದರೆ ಓಟು ಚಲಾಯಿಸುವಾಗ ಎಲ್ಲ ಸದಸ್ಯರೂ ಒಟ್ಟಿಗೆ ಓಟು ನೀಡಬೇಕು.

**ಸೂಚನೆ 1:** ಓಟು ನೀಡುವವರ ಅರ್ಹತೆ ಮತ್ತು ಹುದ್ದೆಗೆ ಅರ್ಹತೆ ಬಗ್ಗೆ ಇರುವ ಶರತ್ತುಗಳು ಅಧ್ಯಕ್ಷ ಪದವಿಗೆ ಆಯ್ಕೆ ಮಾಡುವುದಕ್ಕೆ ಸಂಬಂಧಿಸಿದ ನಿಯಮಗಳಲ್ಲಿ ನಮೂದಿಸಲ್ಪಟ್ಟಿವೆ. (ಎಂದರೆ, ನಿಯಮ ಕ್ರಮಾಂಕ 329, ನಿಯಮ ಕ್ರಮಾಂಕ 330 ಮತ್ತು ನಿಯಮ ಕ್ರಮಾಂಕ 341ರಿಂದ 345)

**ಸೂಚನೆ 2:** ಲೋಕಲ್ ಇಮಾರತಿನ ಕೆಳಗೆ ಪ್ರಾದೇಶಿಕ ಕ್ಷೇತ್ರಗಳ (ಹಲ್ಕ) ಚುನಾವಣೆಗಳು ನಝ್ಝಾರತ್ ಉಲ್‌ಯಾದ ಮೇಲ್ನೋಟದಲ್ಲಿ ಆಗುವುದು. ಸದರ್ ಮತ್ತು ಅವರ ಆಮಿಲಾದ ಸದಸ್ಯರ ಮಂಜೂರಾತಿ ನಾಝಿರ್ ಅಅ್‌ಲಾ ನೀಡುವರು.

**ನಿಯಮ ಕ್ರಮಾಂಕ 333:** ಮಜ್ಲಿಸೆ ಇಂತಿಖಾಬ್ (ಆಯ್ಕೆ ಸಮಿತಿ) ಇದರ ಸದಸ್ಯರ ಸಂಖ್ಯೆ ಬಜೆಟ್‌ನಲ್ಲಿ ನಮೂದಿಸಲಾದ ಚಂದಾ ನೀಡುವವರ ಸಂಖ್ಯೆಗೆ ಅನುಸಾರವಾಗಿರುವುದು.

**ನಿಯಮ ಕ್ರಮಾಂಕ 334:** ಮಜ್ಲಿಸೆ ಇಂತಿಖಾಬ್ (ಆಯ್ಕೆ ಸಮಿತಿ) ಮೂರು ವರ್ಷಗಳಿಗಾಗಿರುವುದು. ಅದರ ಸದಸ್ಯರ ಸಂಖ್ಯೆ ಚಂದಾ ಕೊಡುವವರ ಸಂಖ್ಯೆಗೆ ಅನುಸಾರವಾಗಿರಬೇಕೆಂಬ ಬಗ್ಗೆ ನಿಗಾ ವಹಿಸುವುದು ಸ್ಥಳೀಯ ಜಮಾಅತಿನ ಕಡ್ಡಾಯ ಕರ್ತವ್ಯವಾಗಿದೆ.

* ಮಜ್ಲಿಸೆ ಇಂತಿಖಾಬ್‌ನ (ಆಯ್ಕೆ ಸಮಿತಿ) ಮೆಂಬರ್‌ಗಳ ಮಂಜೂರಾತಿ ಪಡೆಯಲು ಸದರ್ ಅಂಜುಮನ್ ಅಹ್ಮದಿಯಾ ಖಾದಿಯಾನ್ ಮೂಲಕ ಹಝ್ರತ್ ಖಲೀಫತುಲ್ ಮಸೀಹರಿಗೆ ಸಮರ್ಪಿಸಲಾಗುವುದು. ಖಲೀಫತುಲ್ ಮಸೀಹ್ ಮಂಜೂರಾತಿ ನೀಡಿದ ನಂತರ ಅಮೀರ್ ಮತ್ತು ಇತರ ಹುದ್ದೇದಾರರನ್ನು ಈ ಆಯ್ಕೆ ಸಮಿತಿ ಚುನಾಯಿಸುವುದು.

**ನಿಯಮ ಕ್ರಮಾಂಕ 336:** ಮಜ್ಲಿಸೆ ಇಂತಿಖಾಬ್‌ನ (ಆಯ್ಕೆ ಸಮಿತಿ) ಬಗ್ಗೆಗಿನ ರಿಪೋರ್ಟ್, ಚುನಾಯಿತ ಸದಸ್ಯರ ಹೆಸರು ಪಟ್ಟಿ, ಅವರ ಸಹಿ ಅಥವಾ ಹೆಬ್ಬೆಟ್ಟು ಗುರುತು ಮತ್ತು ಪೂರ್ಣವಾದ ವಿಳಾಸ ನಾಝಿರ್ ಅಅ್‌ಲಾರವರಿಗೆ ಮಂಜೂರಾತಿಗೋಸ್ಕರ ಕಳುಹಿಸಿ ಕೊಡಬೇಕು.

**ನಿಯಮ ಕ್ರಮಾಂಕ 337:** ಮಜ್ಲಿಸೆ ಇಂತಿಖಾಬ್‌ನ (ಆಯ್ಕೆ ಸಮಿತಿ) ಅಧ್ಯಕ್ಷರನ್ನು ಸಮಿತಿಯ ಸಭೆಗೆ ಹಾಜರಾದ ಸದಸ್ಯರ ಬಹುಮತ ಪ್ರಕಾರ ನೇಮಿಸಲಾಗುವುದು. ನಾಝಿರೆ ಅಅ್‌ಲಾರವರು ತನ್ನ ಪ್ರತಿನಿಧಿಯನ್ನಾಗಿ ಯಾರನ್ನಾದರೂ ನೇಮಿಸಿದಾಗ ಹೊರತು.

**ನಿಯಮ ಕ್ರಮಾಂಕ 338:** ಮಜ್ಲಿಸೆ ಇಂತಿಖಾಬ್‌ನ (ಆಯ್ಕೆ ಸಮಿತಿ) ಯಾವುದಾದರೊಬ್ಬ ಸದಸ್ಯ ಮೃತ್ಯು, ವಾಸಸ್ಥಳದ ಬದಲಾವಣೆ ಅಥವಾ ಬೇರೆ

ಯಾವುದಾದರೂ ಕಾರಣದಿಂದ ಮಜ್ಲಿಸೆ ಇಂತಿಖಾಬ್ ಸದಸ್ಯನಾಗಿ ಇರದಿದ್ದರೆ, ಅದರ ವಿವರ ತಕ್ಷಣ ನಾಝಿರ್ ಅಳ್‌ಲಾರವರಿಗೆ ತಿಳಿಸಬೇಕಾದುದು ಆವಶ್ಯಕ. (ಅನಂತರ ನಾಝಿರ್ ಅಳ್‌ಲಾರವರ ಅನುಮತಿ ಪಡೆದು ಬದಲಿ ಸದಸ್ಯನನ್ನು ಚುನಾಯಿಸಿ ಮಂಜೂರಾತಿ ಪಡೆಯಬೇಕು).

**ನಿಯಮ ಕ್ರಮಾಂಕ 339:** ಮಜ್ಲಿಸೆ ಇಂತಿಖಾಬ್‌ನ ಸದಸ್ಯರ ಒಟ್ಟು ಸಂಖ್ಯೆಯ ಅರ್ಧಾಂಶದಷ್ಟು ಸದಸ್ಯರು ಹಾಜರಾದರೆ ಸಭೆ ನಡೆಸಬಹುದಾಗಿದೆ.

**ನಿಯಮ ಕ್ರಮಾಂಕ 340:** ಅಮೀರರನ್ನು ಚುನಾಯಿಸುವಾಗ ಈ ಕೆಳಗಿನ ವಿಷಯಗಳನ್ನು ವಿಶಿಷ್ಟವಾಗಿ ಗಮನಿಸಬೇಕು:

1. ಕನಿಷ್ಠ 4 ಹೆಸರುಗಳನ್ನು ಸೂಚಿಸಬೇಕು.

2. ನಿರಂತರ ಎರಡು ಬಾರಿ (ಟರ್ಮ್) ಚುನಾಯಿತರಾದ ಲೋಕಲ್ ಅಮೀರರ ಹೆಸರು ಮೂರನೇ ಟರ್ಮಿಗೆ ಇರಿಸಲಾಗದು. (ಖ಼ಲೀಫತುಲ್ ಮಸೀಹರ ಪತ್ರ :WTT-1033/15-03-2017) - (ನಿಯಮ ಕ್ರಮಾಂಕ: 308A)

ಪ್ರತಿಯೊಬ್ಬ ಸದಸ್ಯನಿಗೆ ಮೂರು ಓಟು ನೀಡುವ ಅಧಿಕಾರವಿದೆ. (ಓಟು ನೀಡುವ ಅಧಿಕಾರವನ್ನು ಚಲಾಯಿಸುವುದು ಆವಶ್ಯಕ.)

3. ಪ್ರತಿಯೊಬ್ಬನಿಗೆ ಲಭಿಸುವ ಓಟುಗಳ ಸಂಖ್ಯೆಯನ್ನು ಬರೆಯಬೇಕು.

4. ಪ್ರತಿಯೊಬ್ಬನು ಬೈಅತ್ ಮಾಡಿದ ವರ್ಷ, ಶೈಕ್ಷಣಿಕ ಯೋಗ್ಯತೆ (ವಿದ್ಯಾಭ್ಯಾಸ), ಉದ್ಯೋಗ, ಹಿಂದೆ ಜಮಾಅತಿಗೆ ಸಲ್ಲಿಸಿದ ಸೇವೆ ಬಗ್ಗೆ ಬರೆಯಬೇಕು.

**ನಿಯಮ ಕ್ರಮಾಂಕ 348:** ಅಮೀರ್ ಮತ್ತು ನಾಇಬ್ ಅಮೀರ್‌ರವರ ಆಯ್ಕೆ ಅಥವಾ ನೇಮಕದ ಮಂಜೂರಾತಿ ಸದರ್ ಅಂಜುಮನ್ ಅಹ್ಮದಿಯಾ ಖಾದಿಯಾನಿನ ನಾಝಿರ್ ಅಳ್‌ಲಾ ಮೂಲಕ ಖಲೀಫತುಲ್ ಮಸೀಹ್ ನೀಡುವರು.

ಮಜ್ಲಿಸ್ ಆಮಿಲದ ಉಳಿದ ಹುದ್ದೇದಾರರಿಗೆ ಮಂಜೂರಾತಿಯನ್ನು ನಾಝಿರ್ ಅಳ್‌ಲಾ ನೀಡುವರು. (ಇದೇ ರೀತಿ ಸ್ಥಳೀಯ ಸದರ್ ಮತ್ತು ಹುದ್ದೇದಾರರಿಗೆ ಮಂಜೂರಾತಿಯನ್ನು ನಾಝಿರ್ ಅಳ್‌ಲಾ ನೀಡುವರು.)

**ನಿಯಮ ಕ್ರಮಾಂಕ 352:** ಚುನಾವಣೆಯ ಹೆಸರು ಪಟ್ಟಿಯನ್ನು ಕೇಂದ್ರಕ್ಕೆ ಕಳುಹಿಸುವಾಗ ಖವಾಇದ್ ಪ್ರಕಾರ ಓಟು ಕೊಡಲು ಅರ್ಹರಾದ ವ್ಯಕ್ತಿಗಳು ಜಮಾಅತಿನಲ್ಲಿ ಎಷ್ಟಿರುವವರು ಮತ್ತು ಚುನಾವಣೆಯ ಮೀಟಿಂಗಿನಲ್ಲಿ ಅವರಲ್ಲಿ ಎಷ್ಟು ಮೆಂಬರ್ ಹಾಜರಿದ್ದರು ಎಂದು ಸ್ಪಷ್ಟವಾಗಿ ನಮೂದಿಸಬೇಕು.

**ನಿಯಮ ಕ್ರಮಾಂಕ 353:** ಚುನಾವಣೆಯ ಹೆಸರುಪಟ್ಟಿಯಲ್ಲಿ ಮೀಟಿಂಗಿನ ಅಧ್ಯಕ್ಷರ ಸಹಿ ಅಲ್ಲದೆ ಯಾವುದೇ ಹುದ್ದೆಗೆ ನಾಮಕರಣಗೊಳ್ಳದ ಆದರೆ ಚುನಾವಣೆಯ ಮೀಟಿಂಗಿನಲ್ಲಿ ಭಾಗವಹಿಸಿದ ಎರಡು ವ್ಯಕ್ತಿಗಳ ಸಹಿ ಕೂಡ ಕಡ್ಡಾಯವಾಗಿ ಇರಬೇಕು.

**ನಿಯಮ ಕ್ರಮಾಂಕ 371:** ಎಲ್ಲ ಸ್ಥಳೀಯ ಹುದ್ದೇದಾರರು (ಅಮೀರ್ ಮಖಾಮಿ ಖಾದಿಯಾನ್ ಕೂಡ) ತಮ್ಮ ತಮ್ಮ ವಲಯದಲ್ಲಿ ಸದರ್ ಅಂಜುಮನ್ ಅಹ್ಮದಿಯಾದ ನಿರ್ದೇಶನ ಮತ್ತು ಮೇಲ್ನೋಟದ ಅಧೀನದಲ್ಲಾಗಿರುವರು. ಪ್ರತಿಯೊಬ್ಬ ನಾಝಿರ್‌ಗೆ ಪ್ರತಿಯೊಬ್ಬ ಸ್ಥಳೀಯ ಜಮಾಅತಿನ ರೆಕಾರ್ಡನ್ನು ನೋಡುವ ಮತ್ತು ಪರಿಶೀಲಿಸುವ (ಚೆಕ್) ಅಧಿಕಾರವಿದೆ. ಅದೇ ರೀತಿಯಲ್ಲಿ, ಆವಶ್ಯವಿದ್ದಲ್ಲಿ ಯಾವುದೇ ರೆಕಾರ್ಡನ್ನು ಖಾದಿಯಾನ್ ಅಥವಾ ಬೇರೆ ಯಾವುದೇ ಸ್ಥಳಕ್ಕೆ ತರಿಸಿಕೊಂಡು ಪರಿಶೀಲಿಸುವ ಅಧಿಕಾರವಿದೆ.

**ನಿಯಮ ಕ್ರಮಾಂಕ 373:** ಸ್ಥಳೀಯ ಜಮಾಅತಿನ ವ್ಯಕ್ತಿಗಳಿಗೆ ಸ್ಥಳೀಯ ಅಮೀರರ ಯಾವುದೇ ತೀರ್ಮಾನ, ಆದೇಶ, ಕೆಲಸ ಇತ್ಯಾದಿಗಳ ವಿರುದ್ಧ ದೂರು ಇದ್ದರೆ, ಅವರಿಗೆ ತಮ್ಮ ಮನವಿಯನ್ನು ಕೇಂದ್ರದ ಮುಂದೆ ಇರಿಸುವ ಹಕ್ಕು ಇದೆ. ಕೇಂದ್ರದ ತೀರ್ಮಾನವನ್ನು ಅನುಸರಿಸುವುದು ಸ್ಥಳೀಯ ಅಮೀರ್ ಮತ್ತು ಸ್ಥಳೀಯ ಜಮಾಅತಿನ ಮೇಂಬರಿಗೆ ಕಡ್ಡಾಯವಾಗಿದೆ. ಸ್ಥಳೀಯ ಅಮೀರರ ತೀರ್ಮಾನ ಅಥವಾ ಆದೇಶದ ವಿರುದ್ಧ ಮಾಡಲಾಗುವ ಮನವಿಯನ್ನು ಸ್ಥಳೀಯ ಅಮೀರರ ಮುಖಾಂತರ ಮಾಡಬೇಕು. ಸ್ಥಳೀಯ ಅಮೀರ್ ಇಂತಹ ಮನವಿಯನ್ನು ತನ್ನ ಅಭಿಪ್ರಾಯದೊಂದಿಗೆ ಏಳು ದಿನಗಳೊಳಗೆ ಕೇಂದ್ರಕ್ಕೆ ಕಳುಹಿಸಬೇಕಾದುದು ಕಡ್ಡಾಯವಾದುದಾಗಿದೆ. ಎಲ್ಲಿಯವರೆಗೆ ಅಪೀಲಿನ ತೀರ್ಮಾನವಾಗುವುದಿಲ್ಲವೋ ಅಲ್ಲಿಯವರೆಗೆ ಆದೇಶವನ್ನು ಅನುಸರಿಸಬೇಕಾಗುವುದು. ಆದರೆ ಅಂತಿಮ ತೀರ್ಮಾನಕ್ಕೆ ಮುಂಚೆ ಸಹ ಆದೇಶವನ್ನು ತಡೆಯುವ ಅಧಿಕಾರ ಕೇಂದ್ರಕ್ಕೆ ಇದೆ.

**ನಿಯಮ ಕ್ರಮಾಂಕ 374:** ಸ್ಥಳೀಯ ಅಮೀರ್ ಸ್ಥಳೀಯ ಜಮಾಅತಿನ ಅತ್ಯಂತ ಹೆಚ್ಚು ಜವಾಬ್ದಾರನಾದ ವ್ಯಕ್ತಿಯಾದ ಕಾರಣ ಭಿನ್ನಾಭಿಪ್ರಾಯದ ಸ್ಥಿತಿಯಲ್ಲಿ ಜಮಾಅತಿನ ಒಳಿತಿಗಾಗಿ ಶಾಂತಿ ವ್ಯವಸ್ಥೆಗೆ ಹಾನಿಕರವೆಂದು ತೋರುವ ಯಾವುದೇ ಸಂಗತಿಯ ಬಹುಮತವನ್ನು ರದ್ದುಗೊಳಿಸುವ ಅಧಿಕಾರವಿದೆ. ಆದರೆ ಇಂತಹ ಅವಸ್ಥೆಯಲ್ಲಿ, ಜಮಾಅತಿನ ಒಡೆತನದಲ್ಲಿ ಇರುವ ಒಂದು ರೆಜಿಸ್ಟರ್‌ನಲ್ಲಿ ತಮ್ಮ ಭಿನ್ನಾಭಿಪ್ರಾಯವನ್ನು ಬರೆಯಬೇಕಾದುದು ಮಖಾಮಿ ಅಮೀರ್‌ಗೆ ಕಡ್ಡಾಯವಾಗಿದೆ. ಆ ಕಾರಣಗಳನ್ನು ಬರೆಯುವುದು ಜಮಾಅತಿಗೆ ಕೇಡುಂಟು ಮಾಡುವುದು ಎಂದು ಭಾವಿಸುವುದಾದರೆ, ಕಡಿಮೆ ಪಕ್ಷ ಹೀಗೆ ನೋಟ್ ಬರೆಯಬೇಕು: "ನಾನು ಕೆಲವು ಕಾರಣಗಳಿಂದ ಬಹುಮತದ ವಿರುದ್ಧ ತೀರ್ಮಾನ ಮಾಡುತ್ತಿದ್ದೇನೆ. ಅವುಗಳನ್ನು ಇಲ್ಲಿ ಬರೆಯುವುದು ಜಮಾಅತಿನ ಒಳಿತಿಗೆ ಕೇಡು ಉಂಟುಮಾಡುವುದು."

ಆ. ಎರಡನೇ ಸ್ಥಿತಿಯಲ್ಲಿ ತಮ್ಮ ಭಿನ್ನಾಭಿಪ್ರಾಯದ ಕಾರಣಗಳನ್ನು ಬರೆದು ರಹಸ್ಯವಾಗಿ ಕೇಂದ್ರಕ್ಕೆ ತಿಳಿಸುವುದು ಸ್ಥಳೀಯ ಅಮೀರ್‌ಗೆ ಕಡ್ಡಾಯವಾದುದಾಗಿದೆ. ಇಂತಹ ರಿಪೋರ್ಟ್ ಒಂದು ವಾರದೊಳಗೆ ಕಳುಹಿಸಬೇಕು. ರಿಪೋರ್ಟ್ ಮಾಡಿದ ಕೂಡಲೇ ರಿಪೋರ್ಟ್ ಮಾಡಿದ ಬಗ್ಗೆ ತಮ್ಮ ಮಜ್ಲಿಸೆ ಆಮಿಲಾಗೆ ಲಿಖಿತ ರೂಪದಲ್ಲಿ ತಿಳಿಸಬೇಕು.

**ನಿಯಮ ಕ್ರಮಾಂಕ 376:** ಪ್ರತಿ ಸ್ಥಳೀಯ, ಕ್ಷೇತ್ರೀಯ, ಜಿಲ್ಲಾ, ಪ್ರಾಂತೀಯ, ರಾಜ್ಯ ಅಥವಾ ರಾಷ್ಟ್ರೀಯ ವ್ಯವಸ್ಥೆಗೆ ಕೇಂದ್ರೀಯ ವ್ಯವಸ್ಥೆಯ ಪ್ರತಿಯೊಂದು ತೀರ್ಮಾನದ ವಿರುದ್ಧ ಖಲೀಫರ ಮುಂದೆ ಅಪೀಲು ಮಾಡುವ ಹಕ್ಕು ಇದೆ.

**ನಿಯಮ ಕ್ರಮಾಂಕ 377:** ಜಮಾಅತಿಗೆ ಕೇಡು ಉಂಟುಮಾಡುವ ವಿಷಯಗಳಲ್ಲಿ ಸ್ಥಳೀಯ ಶಾಖಾ ಸಂಘಟನೆಗಳಿಗೆ ಲಿಖಿತ ಆದೇಶ ಕೊಡುವ ಅಧಿಕಾರ ಸ್ಥಳೀಯ ಅಮೀರ್/ಸದರಿಗೆ ಇದೆ. ಈ ಆದೇಶಗಳು ಸಮಂಜಸವಲ್ಲ ಎಂದು ಶಾಖಾ ಸಂಘಟನೆಗಳು ಭಾವಿಸುವುದಾದರೆ, ತಮ್ಮ ಕೇಂದ್ರೀಯ ಮಜ್‌ಲಿಸ್‌ನ ಮೂಲಕ ಸದರ್ ಅಂಜುಮನ್ ಅಹ್ಮದಿಯಾಗೆ ತಿಳಿಸಬಹುದಾಗಿದೆ.

* * * * * * * * * * * *

**ಅಮೀರರ ಮತ್ತು ಜಮಾಅತ್ ಸದರರ**

## ಹೊಣೆಗಾರಿಕೆಗಳು ಮತ್ತು ಅಧಿಕಾರಗಳು

ಜಮಾಅತಿನಲ್ಲಿ ಪ್ರೀತಿ, ಐಕ್ಯತೆ, ಸಹೋದರ ಭಾವನೆಯ ವಾತಾವರಣ ಸ್ಥಾಪಿಸುವುದು ಜಮಾಅತಿನ ಅಮೀರ್/ಸದರಿನ ಮೇಲಿನ ಮುಖ್ಯ ಹೊಣೆಗಾರಿಕೆಯಾಗಿದೆ. ಜಮಾಅತಿನ ಹುದ್ದೇದಾರರ ಕೆಲಸಗಳ ಮೇಲ್ವಿಚಾರಣೆ ನಡೆಸುವುದು ಮತ್ತು ಅವರಿಗೆ ಮಾರ್ಗದರ್ಶನ ನೀಡುವುದು ಅವರ ಹೊಣೆಗಾರಿಕೆಯಾಗಿದೆ. ಪ್ರತಿ ತಿಂಗಳು ಒಮ್ಮೆ ಮಜ್ಲಿಸೆ ಆಮಿಲದ ಸಭೆ ಜರಗಿಸಿ ಪ್ರತಿ ತಿಂಗಳ ಕೆಲಸಗಳನ್ನು ಪರಿಶೀಲಿಸುವುದು ಅಮೀರ್ ಮತ್ತು ಸದರ್‌ರವರ ಕರ್ತವ್ಯವಾಗಿದೆ. ಅಮೀರ್ ಮತ್ತು ಸದರ್ ಈ ಕೆಳಗಿನ ವಿಷಯಗಳನ್ನು ತಿಳಿದುಕೊಂಡಿರಬೇಕು. ಜಮಾಅತಿನ ಒಟ್ಟು ವ್ಯಕ್ತಿಗಳ ಸಂಖ್ಯೆ ಎಷ್ಟು? ಪುರುಷರೆಷ್ಟು? ಮಹಿಳೆಯರೆಷ್ಟು? ಮಕ್ಕಳೆಷ್ಟು? ಎಷ್ಟು ಜನರು ಚಂದಾ ಕೊಡುತ್ತಿದ್ದಾರೆ? ಚಂದಾ ಕೊಡದವರೆಷ್ಟು? ಉದ್ಯೋಗಿಗಳೆಷ್ಟು? ನಿರುದ್ಯೋಗಿಗಳು ಎಷ್ಟು? ನಿಯತವಾಗಿ ಕ್ರಮ ಪ್ರಕಾರ ನಮಾಝ್ ನಿರ್ವಹಿಸುವವರು ಎಷ್ಟು? ಜಮಾಅತಿನ ನಿಝಾಮ್‌ನೊಂದಿಗೆ ಸಹಕರಿಸುವವರು ಎಷ್ಟು?

ಈ ವಿಷಯಗಳಲ್ಲಿ ಯಾರಾದರೂ ಬಲಹೀನರಾಗಿದ್ದರೆ ಅವರನ್ನು ಗುರುತಿಸಿ ಅವರ ಸುಧಾರಣೆಗೆ ಗಮನಹರಿಸುವುದು ಸಹ ಅಮೀರ್ ಮತ್ತು ಸದರ್‌ರವರ ಜವಾಬ್ದಾರಿಗಳಲ್ಲಿ ಸೇರಿರುತ್ತದೆ. ಈ ವಿಷಯಗಳಿಗೆ ಸಂಬಂಧಿಸಿ ಇತರ ಹುದ್ದೇದಾರರ ಸಹಾಯ ಪಡೆಯುವುದು ಸಹ ಆವಶ್ಯಕವಾಗಿದೆ. ಇದಕೆ ಸಂಬಂಧಿಸಿ ಈ ಕೆಳಗಿನ ನಿಯಮಗಳನ್ನು ಗಮನದಲ್ಲಿರಿಸಬೇಕು:

**1. ನಿಯಮ ಕ್ರಮಾಂಕ 366:** ಅಮೀರ್ ಮತ್ತು ಸದರ್, ಖಿಲಾಫತಿನ ಪ್ರತಿನಿಧಿಯಾಗಿ ತಮ್ಮ ಕಾರ್ಯಕ್ಷೇತ್ರದಲ್ಲಿ ಅಹ್ಮದಿಯರ ಆಧ್ಯಾತ್ಮಿಕ, ನೈತಿಕ, ಅನುಷ್ಠಾನಕ್ಕೆ ಸಂಬಂಧಿಸಿದ, ತಬ್ಲೀಗಿಗೆ ಸಂಬಂಧಿಸಿದ, ಆರ್ಥಿಕ, ಸಾಂಸ್ಕೃತಿಕ ಮತ್ತು ಶಾರೀರಿಕ ಏಳಿಗೆಗೆ ತಮಗೆ ಸಾಧ್ಯವಿರುವಷ್ಟು ಪ್ರಯತ್ನ ಮಾಡುವುದು ಅವರ ಹೊಣೆಗಾರಿಕೆಯಾಗಿದೆ. ಜಮಾಅತನ್ನು ಸ್ಥಾಪಿಸಲು, ಬಲಪಡಿಸಲು ಮತ್ತು ಅಭಿವೃದ್ಧಿಗೊಳಿಸಲು ಕಾರ್ಯವಿಧಾನಗಳನ್ನು ಯೋಚಿಸಿ ಅವರು ಕಾರ್ಯಪ್ರವೃತ್ತರಾಗಬೇಕು.

**2. ನಿಯಮ ಕ್ರಮಾಂಕ 367:** ಅಮೀರ್ (ಅಥವಾ ಸದರ್) ತಮ್ಮ ಜಮಾಅತಿನ

ಅತ್ಯುನ್ನತ ಹುದ್ದೇದಾರರಾಗಿರುವ ಕಾರಣ ಅವರು ತಮ್ಮ ವಲಯದಲ್ಲಿ ಉತ್ತಮ ಮಾದರಿಯಾಗಲು ಪ್ರಯತ್ನಿಸುವುದು ಆವಶ್ಯಕವಾಗಿದೆ. ಅವರು ಸಹಾನುಭೂತಿ ಹೊಂದಿದವರೂ ವಾತ್ಸಲ್ಯಮಯರೂ ನ್ಯಾಯಪಾಲಿಸುವವರೂ ಆಗಿರಬೇಕು. ಅವರನ್ನು ಜನರು ತಾವಾಗಿ ಪ್ರೀತಿಸಿ, ಗೌರವಿಸಿ ಅನುಸರಿಸುವಂತಾಗಬೇಕು. ಯಾವುದಾದರೂ ಭಿನ್ನಾಭಿಪ್ರಾಯ ತಲೆದೋರಿದರೆ ಅವರು ಪಕ್ಷಪಾತಿಯಾಗಿಯೂ ವರ್ತಿಸಬಾರದು.

**3. ನಿಯಮ ಕ್ರಮಾಂಕ 368:** ಅಮೀರ್ ಮತ್ತು ಸದರ್ ಮುಖ್ಯ ವಿಷಯಗಳಲ್ಲಿ ಜಮಾಅತಿನ ಸದಸ್ಯರಿಂದ ಸಲಹೆ ಕೇಳಬೇಕು. ಬಹುಮತದವಿರುವ ಅಭಿಪ್ರಾಯವನ್ನು ಅವರು ಗೌರವಿಸಬೇಕು. ಚಿಕ್ಕ ಪುಟ್ಟ ಅಭಿಪ್ರಾಯ ವ್ಯತ್ಯಾಸದ ಕಾರಣ ಬಹುಮತದ ಅಭಿಪ್ರಾಯದ ವಿರುದ್ಧ ಕ್ರಮ ತೆಗೆದುಕೊಳ್ಳಬಾರದು. ಅಮೀರ್ ಮತ್ತು ಸದರ್ ಸಲಹೆ ಕೇಳುವಾಗ ಒಮ್ಮತದ ತೀರ್ಮಾನವಾಗಲು ತಮಗೆ ಸಾಧ್ಯವಿರುವಷ್ಟು ಪ್ರಯತ್ನ ಮಾಡಬೇಕು.

ಅಮೀರ್ ಮತ್ತು ಸದರ್‌ರವರ ಅಧಿಕಾರದ ಬಗ್ಗೆ ಸ್ಪಷ್ಟನೆ:

**ನಿಯಮ ಕ್ರಮಾಂಕ 369:** ಅಮೀರ್ ಮತ್ತು ಸದರ್ ಇವರಿಬ್ಬರ ಅಧಿಕಾರದಲ್ಲಿ ವ್ಯತ್ಯಾಸವಿದೆ. ಜಮಾಅತ್ ಮಾಡುವ ತೀರ್ಮಾನಗಳನ್ನು ಯಾವಾಗಲೂ ಅಂಗೀಕರಿಸಬೇಕೆಂಬ ಬದ್ಧತೆ ಅಮೀರ್‌ರರಿಗೆ ಇರುವುದಿಲ್ಲ. ಎಂದರೆ ಅಸಾಧಾರಣ ಸಂದರ್ಭಗಳಲ್ಲಿ ತನ್ನ ಕಾರಣಗಳನ್ನು ಬರೆದು ಸ್ಥಳೀಯ ಜಮಾಅತಿನ ತೀರ್ಪು ರದ್ದುಗೊಳಿಸುವ ಅಧಿಕಾರ ಅಮೀರ್‌ರವರಿಗಿದೆ. ಆದರೆ ಸದರ್ ಜಮಾಅತಿನ ತೀರ್ಮಾನಗಳನ್ನು ಅಂಗೀಕರಿಸಲು ಬದ್ಧರಾಗಿರುತ್ತಾರೆ. ಆದರೆ ಅಮೀರ್ ಮತ್ತು ಸದರ್ ಇವರಿಬ್ಬರೂ ಕೇಂದ್ರದ ಅಧಿಕಾರಿಗಳ ಮಾರ್ಗದರ್ಶನಗಳನ್ನು ಪಾಲಿಸಲು ಬದ್ಧರಾಗಿರುತ್ತಾರೆ.

**5. ನಿಯಮ ಕ್ರಮಾಂಕ 370:** ಯಾರಿಗಾದರೂ ಶಿಕ್ಷೆ ವಿಧಿಸುವ ಅಧಿಕಾರ ಮಜ್ಲಿಸೆ ಆಮಿಲಕ್ಕಿಲ್ಲ. ಜಮಾಅತಿನ ಒಬ್ಬ ಸದಸ್ಯ ನಿಝಾಮೆ ಜಮಾಅತ್ ವಿರುದ್ಧ ವರ್ತಿಸಿದರೆ ಅವನ ಸುಧಾರಣೆಗೋಸ್ಕರ ಮಜ್ಲಿಸೆ ಆಮಿಲ ಕೆಲಸಮಾಡಬಹುದು. ಆದರೆ ಸುಧಾರಣೆ ಮಾಡುವ ಕೆಲಸ ಯಶಸ್ಸನ್ನು ಗಳಿಸದಿದ್ದರೆ ಕೇಂದ್ರಕ್ಕೆ ವರದಿ ಮಾಡಬೇಕು. ಯಾವುದಾದರೂ ವ್ಯಾಜ್ಯಕ್ಕೆ ಸಂಬಂಧಿಸಿ ತೀರ್ಪು ನೀಡುವ

ಅಧಿಕಾರ ಮಜ್ಲಿಸೆ ಆಮಿಲಕ್ಕಿಲ್ಲ.

**6. ನಿಯಮ ಕ್ರಮಾಂಕ 303:** ಕೇಂದ್ರದಿಂದ ಒಬ್ಬ ನಾಝಿರ್ ಪ್ರವಾಸ ಮಾಡುತ್ತಾ ಒಂದು ಜಮಾಅತಿಗೆ ಭೇಟಿ ನೀಡುವುದಾದರೆ, ಖಲೀಫತುಲ್ ಮಸೀಹರ ಪ್ರತಿನಿಧಿ ಎಂಬ ನೆಲೆಯಲ್ಲಿ ತಕ್ಕುದಾದ ಗೌರವಾದರದೊಂದಿಗೆ ಆವಶ್ಯಕವಾದ ವ್ಯವಸ್ಥೆಗಳನ್ನು ಅವರಿಗೆ ಮಾಡಕೊಡಬೇಕಾದುದು ಪ್ರತಿಯೊಂದು ಜಮಾಅತಿನ ಕರ್ತವ್ಯವಾಗಿದೆ.

**7. ನಿಯಮ ಕ್ರಮಾಂಕ 305:** ಯಾವುದಾದರೂ ಜಮಾಅತ್‌ನಲ್ಲಿ ಯಾವುದಾದರೊಂದು ವಿಭಾಗಕ್ಕೆ ಹುದ್ದೇದಾರನನ್ನು ಚುನಾಯಿಸದಿದ್ದರೆ ಆ ವಿಭಾಗದ ಹೊಣೆಗಾರಿಕೆ ಅಮೀರ್ ಅಥವಾ ಸದರ್ ನಿರ್ವಹಿಸಬೇಕು.

* * * * * * * *

ಭಾರತದಲ್ಲಿ ಹಿಂದೆ ಸ್ಟೇಟ್ ಇಮಾರತಿನ ವ್ಯವಸ್ಥೆ ನೆಲೆಯಲ್ಲಿತ್ತು. ಅನಂತರ ಇದು ಜೋನಲ್ ವ್ಯವಸ್ಥೆಯಾಗಿ ಬದಲಾಯಿತು. 2013ರಿಂದ ಸಯ್ಯದನಾ ಹಝ್ರತ್ ಅಮೀರುಲ್ ಮುಅ್‌ಮಿನೀನ್ ಖಲೀಫತುಲ್ ಮಸೀಹ್ ಅಲ್‌ಖಾಮಿಸ್‌ರು (ಅಯ್ಯದಹುಲ್ಲಾಹ್) ಜಿಲ್ಲಾ ವ್ಯವಸ್ಥೆ ಸ್ಥಾಪಿಸಲು ನಿರ್ದೇಶನ ನೀಡಿದರು. ಐದು ಅಥವಾ ಐದಕ್ಕಿಂತ ಅಧಿಕ ಜಮಾಅತುಗಳಿರುವ ಜಿಲ್ಲೆಯಲ್ಲಿ ಇಮಾರತ್ ವ್ಯವಸ್ಥೆ ಸ್ಥಾಪಿಸಲು ಮಂಜೂರಾತಿ ನೀಡಿದರು. ಅಲ್ಲಾಹನ ಅನುಗ್ರಹದಿಂದ ಈಗ 113 ಜಿಲ್ಲಾ ಇಮಾರತ್‌ಗಳು ಸ್ಥಾಪಿತಗೊಂಡಿವೆ.

ಜಿಲ್ಲಾ ಇಮಾರತಿನ ಚುನಾವಣೆ/ನೇಮಕ ಮತ್ತು ಆಮಿಲದ ನೇಮಕದ ಕಾನೂನು ಮತ್ತು ನಿರ್ದೇಶನಗಳನ್ನು ಕೆಳಗೆ ಕೊಡಲಾಗಿದೆ:

**ನಿಯಮ ಕ್ರಮಾಂಕ 296:** ಒಂದುಕ್ಕಿಂತ ಹೆಚ್ಚು ಸ್ಥಳಗಳಲ್ಲಿರುವ ಸ್ಥಳೀಯ ಜಮಾಅತುಗಳನ್ನು ಸೇರಿಸಿ ಹಲ್‌ಕಾ ಸ್ತರದಲ್ಲಿ, ಜಿಲ್ಲಾ, ಪ್ರಾಂತೀಯ, ರಾಜ್ಯ ಅಥವಾ ದೇಶೀಯ ಅಂಜುಮನ್‌ಗಳನ್ನು ಸ್ಥಾಪಿಸಬಹುದಾಗಿದೆ. ಈ ಸ್ಥಿತಿಯಲ್ಲಿ ಅದರಲ್ಲಿ ಪ್ರತಿಯೊಂದು ವ್ಯವಸ್ಥೆ ಅದಕ್ಕಿಂತ ಮೇಲಿನ ವ್ಯವಸ್ಥೆಯ ಅಧೀನದಲ್ಲಾಗಿರುವುದು ಮತ್ತು ಈ ಎಲ್ಲ ವ್ಯವಸ್ಥೆಗಳು ಕೇಂದ್ರೀಯ ವ್ಯವಸ್ಥೆಯ ಅಧೀನದಲ್ಲಾಗಿರುವುವು.

**ನಿಯಮ ಕ್ರಮಾಂಕ 298:** ಕ್ಷೇತ್ರೀಯ ಇಮಾರತಿನ ಪರಿಮಿತಿಯನ್ನು ಆವಶ್ಯ ಅನುಸಾರ ನಾಝಿರ್ ಆಅ್‌ಲಾ ನಿಶ್ಚಯಿಸುವರು. ಅದು ಕನಿಷ್ಠ ಐದು ಸ್ಥಳೀಯ

ಜಮಾಅತುಗಳನ್ನು ಒಳಗೊಂಡಿರುವುದು.

**ಸೂಚನೆ:** ಮೇಲೆ ಪ್ರಸ್ತಾಪಿಸಲಾದ ಹಾಗೆ ಐದು ಅಥವಾ ಐದಕ್ಕಿಂತ ಅಧಿಕ ಜಮಾಅತುಗಳು ಇರುವ ಭಾರತದ ಜಿಲ್ಲೆಗಳಲ್ಲಿ ಜಿಲ್ಲಾ ಇಮಾರತ್ ಸ್ಥಾಪಿಸಲು ಹಝ್ರತ್ ಖಲೀಫತುಲ್ ಮಸೀಹ್(ಅಯ್ಯದಹುಲ್ಲಾಹ್) ಮಂಜೂರಾತಿ ನೀಡಿದ್ದಾರೆ.

## ಅಮೀರ್ ಜಿಲ್ಲೆಯ ಚುನಾವಣೆಯ ನಿಯಮಗಳು

ಅಮೀರ್ ಜಿಲ್ಲೆಯ ಚುನಾವಣೆ ಜಿಲ್ಲೆಯ ಎಲ್ಲ ಜಮಾಅತುಗಳ ಅಮೀರ್‌ಗಳ ಮತ್ತು ಜಮಾಅತಿನ ಸದರ್‌ಗಳ ಮೂಲಕ ನಡೆಯುವುದು. ಜಿಲ್ಲೆಯ ಜಮಾಅತುಗಳ ಯಾವುದೇ ವ್ಯಕ್ತಿಯ ಹೆಸರು ಅಮೀರ್ ಜಿಲ್ಲೆಗಾಗಿ ಮುಂದಿರಿಸಬಹುದಾಗಿದೆ. ಆದರೆ ಆ ವ್ಯಕ್ತಿ ಕ್ರಮವಾಗಿ ಚಂದಾಕೊಡುವವನಾಗಿರಬೇಕು ಮತ್ತು ಚಂದಾ ಕೊಡಲು ಬಾಕಿಯಾಗಿರಬಾರದು. ಎಂದರೆ ನಿಯಮ ಕ್ರಮಾಂಕ 329ರ ಶರತ್ತನ್ನು ಪೂರ್ತಿಗೊಳಿಸಿರಬೇಕು.

2. ಲೋಕಲ್ ಅಮೀರ್/ಸದರ್ ಜಮಾಅತ್ ಸ್ವತಃ ಚುನಾವಣೆಯಲ್ಲಿ ಭಾಗವಹಿಸಬೇಕು. ಅವರ ಪ್ರತಿನಿಧಿ ಚುನಾವಣೆಯಲ್ಲಿ ಭಾಗವಹಿಸುವ ಹಾಗಿಲ್ಲ.

3. ಅಮೀರ್ ಜಿಲ್ಲೆಯ ಚುನಾವಣೆಯ ಕೋರಮ್ ಅರ್ಧಕ್ಕಿಂತ (1/2) ಕಡಿಮೆಯಾಗಿರಬಾರದು. ಅದು ಮೊದಲ ಅಥವಾ ಎರಡನೇ ಮೀಟಿಂಗ್ ಆದರೂ ಸರಿ. ಎಂದರೆ ಹತ್ತು ಜಮಾಅತುಗಳು ಇದ್ದರೆ ಕನಿಷ್ಠ ಪಕ್ಷ ಐದು ಜಮಾಅತಿನ ಅಮೀರ್/ಸದರ್ ಚುನಾವಣೆಯ ಸಂದರ್ಭದಲ್ಲಿ ಇರಬೇಕು.

ನಿರ್ಬಂಧಿತ ಸ್ಥಿತಿಯಲ್ಲಿ ಹೊರತು ಯಾವುದೇ ಅಮೀರ್/ಸದರ್ ಜಮಾಅತ್ ಚುನಾವಣೆಯ ಸಂದರ್ಭದಲ್ಲಿ ಗೈರು ಹಾಜರಾಗಿರಬಾರದು.

4. ಅಮೀರ್ ಜಿಲ್ಲೆಗಾಗಿ ಕನಿಷ್ಠ ನಾಲ್ಕು ಹೆಸರುಗಳನ್ನು ಮುಂದಿರಿಸಬೇಕು.

5. ಪ್ರತಿಯೊಬ್ಬ ಮೇಂಬರ್ ಮೂರು ಓಟು ಕಡ್ಡಾಯವಾಗಿ ಹಾಕಬೇಕು. ಪ್ರತಿಯೊಬ್ಬ ಮೆಂಬರ್ ಮೂರು ಹೆಸರುಗಳನ್ನು ನಿರ್ದೇಶಿಸಬಹುದಾಗಿದೆ ಮತ್ತು ಮೂರು ವ್ಯಕ್ತಿಗಳನ್ನು ತಾಈದ್ ಮಾಡಬಹುದಾಗಿದೆ. (ಎಂದರೆ, ಆವಶ್ಯವಿದ್ದಲ್ಲಿ ಒಬ್ಬ ಮೆಂಬರ್ ಒಂದಕ್ಕಿಂತ ಹೆಚ್ಚು ಹೆಸರುಗಳನ್ನು ಸೂಚಿಸಬಹುದಾಗಿದೆ ಮತ್ತು ಒಂದಕ್ಕಿಂತ ಅಧಿಕ ಹೆಸರುಗಳನ್ನು ತಾಈದ್ ಮಾಡಬಹುದಾಗಿದೆ.)

6. ಮುಂದಿರಿಸಲಾಗುವ ವ್ಯಕ್ತಿ ಬೈಅತ್ ಮಾಡಿದ ವರ್ಷ, ಶೈಕ್ಷಣಿಕ (ವಿದ್ಯಾಭ್ಯಾಸ) ಯೋಗ್ಯತೆ, ವಯಸ್ಸು, ಉದ್ಯೋಗ, ಹಿಂದೆ ಮಾಡಿದ ಜಮಾಅತಿನ ಸೇವೆಗಳನ್ನು ನಮೂದಿಸಬೇಕು.

7. ಪ್ರತಿಯೊಂದು ಹೆಸರಿನ ಮುಂದೆ ಅವರಿಗೆ ಲಭಿಸಿದ ಓಟುಗಳನ್ನು ವಿಶದವಾಗಿ ನಮೂದಿಸಬೇಕು.

8. ಯಾರ ಹೆಸರು ಅಮೀರ್ ಜಿಲ್ಲೆಗಾಗಿ ಹೇಳಲು ಸಾಧ್ಯವಿಲ್ಲವೋ ಅವರನ್ನು ಚುನಾವಣೆಯ ಅಧ್ಯಕ್ಷನಾಗಿ ಮಾಡಬೇಕು ಅಥವಾ ಮುಬಲ್ಲಿಗರು ಮೀಟಿಂಗಿನ ಅಧ್ಯಕ್ಷತೆ ವಹಿಸಲಿ.

ಸಾಮಾನ್ಯವಾಗಿ, ನಾಝಿರ್ ಆಲ್‌ಲಾ ಖಾದಿಯಾನ್ ಕಡೆಯಿಂದ ಜಿಲ್ಲಾ ಅಮೀರರ ಚುನಾವಣೆಗಾಗಿ ಕೇಂದ್ರೀಯ ಪ್ರತಿನಿಧಿಯನ್ನು ನಿಶ್ಚಯಿಸಿ ತಿಳಿಸಲಾಗುತ್ತದೆ. ಆ ಪ್ರತಿನಿಧಿ ತನ್ನ ಮೇಲ್ನೋಟ ಮತ್ತು ಅಧ್ಯಕ್ಷತೆಯಲ್ಲಿ ಚುನಾವಣೆ ನಡೆಸುವರು.

9. ನಾಇಬ್ ಜಿಲ್ಲಾ ಅಮೀರರ ನೇಮಕಾತಿ ಬಗ್ಗೆ ಹಝ್ರ್‌ರತ್ ಖ಼ಲೀಫತುಲ್ ಮಸೀಹರ ನಿರ್ದೇಶನ ಲಭಿಸಿದೆ: ಭಾರತದಲ್ಲಿ ಎಲ್ಲೆಲ್ಲ ಜಿಲ್ಲಾ ಅಮೀರರು ಇರುವರೋ ಅಲ್ಲೆಲ್ಲ ಒಂದು ಅವಲೋಕನ ನಡೆಸಿ ಒಬ್ಬ ನಾಇಬ್ ಅಮೀರ್ ಮತ್ತು ಆವಶ್ಯಾನುಸಾರ ಇಬ್ಬರು ನಾಇಬ್‌ಗಳನ್ನು ನಿಶ್ಚಯಿಸುವುದರ ಕುರಿತು ಕಾರ್ಯಚರಣೆ ನಡೆಸಬೇಕು. (WTT- 4856/14-06-2016)

10. ಜಿಲ್ಲಾ ಅಮೀರರ ಚುನಾವಣೆ ಮತ್ತು ನಾಇಬ್ ಅಮೀರರ ನೇಮಕಾತಿಯ ರಿಪೋರ್ಟ್ ಹಝ್ರ್‌ರತ್ ಖ಼ಲೀಫತುಲ್ ಮಸೀಹರಿಗೆ ಸಮರ್ಪಿಸಿ ಮಂಜೂರಾತಿ/ನಿರ್ದೇಶನ ಪಡೆದು ತಿಳಿಸಲಾಗುವುದು.

ಜಿಲ್ಲಾ ಮಜ್ಲಿಸ್ ಆಮಿಲದ ನಿಯಮಗಳು

**ನಿಯಮ ಕ್ರಮಾಂಕ 360:** ಅ. ತನ್ನ ನೆರವಿಗಾಗಿ ಜಿಲ್ಲಾ ಮಜ್ಲಿಸ್ ಆಮಿಲ ತಯಾರು ಮಾಡಿ ನಝ್ಝಾರತ್ ಉಲ್‌ಯಾದಿಂದ ಮಂಜೂರಾತಿ ಪಡೆಯುವ ಹಕ್ಕು ಜಿಲ್ಲಾ ಅಮೀರಿಗಿದೆ.

ಆ. ಜಿಲ್ಲಾ ಆಮಿಲಾ: ಇದು ನಾಇಬ್ ಅಮೀರ್ ಜಿಲ್ಲಾ ಮತ್ತು ವಿವಿಧ

ಕೇಂದ್ರೀಯ ವಿಭಾಗಗಳ ಕರ್ತವ್ಯಗಳನ್ನು ನಿರ್ವಹಿಸಲು ಜಿಲ್ಲಾ ಅಮೀರ್ ನೇಮಿಸುವ ಹುದ್ದೇದಾರರನ್ನು ಒಳಗೊಂಡದ್ದಾಗಿರುತ್ತದೆ. ಆ ಹುದ್ದೇದಾರರನ್ನು ಅವರ ವಿಭಾಗದ ಜಿಲ್ಲಾ ಸೆಕ್ರೆಟರಿ ಎಂದು ಹೇಳಲಾಗುತ್ತದೆ.

ಅದೇ ರೀತಿಯಲ್ಲಿ ಜಿಲ್ಲಾ ನಾಝಿಮ್ ಅನ್ಸಾರುಲ್ಲಾಹ್, ಜಿಲ್ಲಾ ಖಾಇದ್ ಖುದ್ದಾಮುಲ್ ಅಹ್ಮದಿಯಾ ಮತ್ತು ಜಿಲ್ಲಾ ಮುಬಲ್ಲಿಗ್ ಈ ಮಜ್ಲಿಸ್ ಆಮಿಲಾದ ಮೇಂಬರ್ ಆಗಿರುವುವು.

ಇ. ನಿಯಮ ಕ್ರಮಾಂಕ 329ರ ಪ್ರಕಾರ ಓಟು ಚಲಾಯಿಸಲು ಮತ್ತು ಹುದ್ದೆ ಹೊಂದಲು ಅರ್ಹರಾದ ಮೆಂಬರನ್ನು ಮಾತ್ರ ಜಿಲ್ಲಾ ಅಮೀರ್ ನೇಮಿಸಬಹುದಾಗಿದೆ.

**ವಿಶೇಷ ಸೂಚನೆ:** ಮೇಲೆ ಪ್ರಸ್ತಾಪಿಸಲಾದ ಹಾಗೆ ಖಾದಿಯಾನಿನಲ್ಲಿ ಹಝ್ರತ್ ಖಲೀಫತುಲ್ ಮಸೀಹ್(ಅಯ್ಯದಹುಲ್ಲಾಹ್) ಒಂದು ಕೇಂದ್ರೀಯ ಚುನಾವಣೆ ಸಮಿತಿಯನ್ನು ನಿಶ್ಚಯಿಸಿದ್ದಾರೆ. ಜಿಲ್ಲಾ ಅಮೀರರ ಕಡೆಯಿಂದ ಕಳುಹಿಸಲಾಗುವ ಜಿಲ್ಲಾ ಮಜ್ಲಿಸ್ ಆಮಿಲಾದ ಹೆಸರುಗಳ ಬಗ್ಗೆ ನಝಾರತ್ ಉಲ್ಯಾ, ನಝಾರತ್ ಬೈತುಲ್ ಮಾಲ್ ಆಮದ್ ಮತ್ತು ನಝಾರತ್ ಉಮೂರೆ ಆಮ್ಮದಿಂದ (ಕ್ಲಿಯರನ್ಸ್) ಪಡೆದ ನಂತರ ಕೇಂದ್ರೀಯ ಚುನಾವಣೆ ಸಮಿತಿಯ ಮುಂದಿರಿಸಲಾಗುವುದು. ಜಿಲ್ಲಾ ಆಮಿಲಾದ ಮಂಜೂರಾತಿ ಕೇಂದ್ರೀಯ ಚುನಾವಣೆ ಸಮಿತಿ ನೀಡುವುದು.

ಜಿಲ್ಲಾ ಮಜ್ಲಿಸ್ ಆಮಿಲಕ್ಕಾಗಿ 13 ಸೆಕ್ರೆಟರಿಯರ ಹೆಸರು ಕೆಳಗೆ ಕೊಡಲಾಗಿದೆ:

ಜಿಲ್ಲೆಯ ಜಮಾಅತುಗಳ ಸಂಖ್ಯೆ ಹತ್ತಕ್ಕಿಂತ ಕಡಿಮೆಯಾಗಿದ್ದರೆ ಮತ್ತು ತಜ್‌ನೀದ್ ಸಹ ಅಧಿಕವಲ್ಲದಿದ್ದರೆ ಮೊದಲ ಐದು ಹುದ್ದೆಗಳು ಮತ್ತು ಉಳಿದ ಎಂಟು ಹುದ್ದೆಗಳಲ್ಲಿ ಜಮಾಅತಿನ ಆವಶ್ಯಾನುಸಾರ ಎರಡು ಹುದ್ದೆಗಳಿಗೆ ಜಿಲ್ಲಾ ಸೆಕ್ರೆಟರಿಯ ಹೆಸರು ನಿರ್ದೇಶಿಸಿ ಕಳುಹಿಸಬೇಕು. ಜಮಾಅತುಗಳ ಸಂಖ್ಯೆ ಹತ್ತಕ್ಕಿಂತ ಅಧಿಕವಿರುವ ಜಿಲ್ಲೆಗಳಲ್ಲಿ ಎಲ್ಲ ಹದಿಮೂರು ಹುದ್ದೆಗಳಿಗೆ ಜಿಲ್ಲಾ ಸೆಕ್ರೆಟರಿಯರ ಹೆಸರು ನಿರ್ದೇಶಿಸಿ ಕಳುಹಿಸಬೇಕು.

ಪ್ರತಿಯೊಂದು ಹುದ್ದೆಗಾಗಿ ಎರಡೆರಡು ಹೆಸರುಗಳನ್ನು ನಿರ್ದೇಶಿಸುವುದು ಉತ್ತಮ. ಆಗ ಕೇಂದ್ರೀಯ ಚುನಾವಣೆ ಸಮಿತಿಗೆ ಅವಲೋಕನ ನಡೆಸಿ ಒಬ್ಬರ

ಮಂಜೂರಾತಿ ನೀಡಲು ಸಾಧ್ಯವಾಗುವುದು.

1. ಜಿಲ್ಲಾ ಸೆಕ್ರಿಟರಿ ಇಸ್ಲಾಹೋ ಇರ್‌ಶಾದ್.
2. ಜಿಲ್ಲಾ ಸೆಕ್ರಿಟರಿ ದಅ್‌ವತೆ ಇಲಲ್ಲಾಹ್.
3. ಜಿಲ್ಲಾ ಸೆಕ್ರಿಟರಿ ತಅ್‌ಲೀಮುಲ್ ಖುರ್‌ಆನ್ ವಖ್‌ಫೆ ಆರ್‌ಝಿ.
4. ಜಿಲ್ಲಾ ಸೆಕ್ರಿಟರಿ ಇಶಾಅತ್ ಮತ್ತು ಎಂ.ಟಿ.ಎ.
5. ಜಿಲ್ಲಾ ಸೆಕ್ರಿಟರಿ ಮಾಲ್
6. ಜಿಲ್ಲಾ ಸೆಕ್ರಿಟರಿ ತಅ್‌ಲೀಮ್
7. ಜಿಲ್ಲಾ ಸೆಕ್ರಿಟರಿ ವಖ್‌ಫೆ ನೌ.
8. ಜಿಲ್ಲಾ ಸೆಕ್ರಿಟರಿ ಉಮೂರೆ ಆಮ್ಮ ಮತ್ತು ಖ಼ಾರ್‌ಜ.
9. ಜಿಲ್ಲಾ ಸೆಕ್ರಿಟರಿ ವಸಾಯಾ
10. ಜಿಲ್ಲಾ ಸೆಕ್ರಿಟರಿ ಜಾಈದಾದ್
11. ಜಿಲ್ಲಾ ಸೆಕ್ರಿಟರಿ ತಹ್‌ರೀಕ್ ಜದೀದ್
12. ಜಿಲ್ಲಾ ಸೆಕ್ರಿಟರಿ ವಖ್‌ಫೆ ಜದೀದ್.
13. ಜಿಲ್ಲಾ ಸೆಕ್ರಿಟರಿ ರಿಶ್ತ ನಾತ.